ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 37 | ಸೆಪ್ಟೆಂಬರ್ 9, 1984 | ಬೆಲೆ 60 ಪೈಸೆ.

ಆಂಧ್ರದ ಶಾಸನಸಭೆ ಕರೆಯುವ ನಿರ್ಧಾರ

ಜನತೆಯ ಐಕ್ಯ ಹೋರಾಟದ ಅದ್ಭುತ ವಿಜಯ

ಆಂಧ್ರ ಪ್ರದೇಶದ ವಿಧಾನ ಸಭೆಯ ಅಧಿವೇಶನ ಸೆಪ್ಟೆಂಬರ್ 11 ರಂದು ಸೇರಲಿದೆ. ಅಂದು ಇಂದಿರಾ ಕಾಂಗ್ರೆಸ್ ಚೇಲ ಭಾಸ್ಕರ್ ರಾವ್ ಅವರು ಇಪ್ಪತ್ತೈದು ದಿವಸದ ತಮ್ಮ ಅಧಿಕಾರ ಗದ್ದುಗೆಯಿಂದ ಕೆಳಗಿಳಿಸಲ್ಪಟ್ಟು ಎನ್. ಟಿ. ರಾಮರಾವ್ ಮತ್ತೆ ಅಧಿಕಾರಕ್ಕೆ ಬಂದೇ ತೀರುತ್ತಾರೆಂದು ಆಶಿಸೋಣ.

ನಮ್ಮ ದೇಶದ ಜನತೆ ನಡೆಸಿದ ಆಂದೋಲನಕ್ಕೆ, ಜನತಂತ್ರ ಶಕ್ತಿಗಳಿಗೆ ಲಭಿಸಿದ ವಿಜಯವಿದಾಗಿದೆ. ಪ್ರಜಾ ಪ್ರಭುತ್ವ ಹಕ್ಕುಗಳನ್ನು ನಾಶ ಮಾಡುವ ಸರ್ವಾಧಿಕಾರಿ ಶಕ್ತಿಗಾದ ಸೋಲು ಇದಾಗಿದೆ. ಎಲ್ಲ ವಿರೋಧ ಪಕ್ಷಗಳ, ಸಾಮಾನ್ಯ ಜನರ ಜಾಗೃತ ಐಕ್ಯ ಹೋರಾಟದ ಪ್ರತಿ ಫಲಕ್ಕೆ ಗೆಲುವಾಗಿದೆ.

ತುರ್ತು ಪರಿಸ್ಥಿತಿಯ ಕರಾಳರಾಣಿಯ ಕ್ರೂರ ಕೃತ್ಯಗಳಿಗೆ ಬೇಸತ್ತ ಭಾರತದ ಜನತೆ 1977 ರ ಲೋಕ ಸಭೆ ಚುನಾವಣೆಯಲ್ಲಿ ಸರ್ವಾಧಿಕಾರಿ, ಜನತಂತ್ರದ ನಾಗರೀಕ ಹಕ್ಕಿನ ಕೊಲೆಗಾರ್ತಿ ಇಂದಿರಾಗಾಂಧಿಯನ್ನು ಸೋಲಿಸಿದ್ದರು. ತುರ್ತು ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ, ರಕ್ತ ಸುರಿಸಿ, ಸೆರೆಮನೆ ಸೇರಿ, ನೌಕರಿ ಕಳೆದುಕೊಂಡು ಧೀರೋದ್ದಾತರಾಗಿ ಹೋರಾಡಿದ ರೈತ—ಕಾರ್ಮಿಕ, ವಿದ್ಯಾರ್ಥಿ—ಯುವಜನತೆ ಹಾಗೆಯೇ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ವಿರೋಧ ಪಕ್ಷಗಳಿಗೆ ಸಲ್ಲುತ್ತದೆ ಏಕ ವ್ಯಕ್ತಿ ಸರ್ವಾಧಿಕಾರವನ್ನು ಸೋಲಿಸಿದ್ದರ ಪ್ರತೀಕ.

1980 ರಲ್ಲಿ ಮತ್ತೆ ಗೆಲಿ ಎತ್ತಿದ ಈ ಶಕ್ತಿ ಪ್ರಾರಂಭದಲಿ ಅಂಜುತ್ತಾ ನಡೆದು 1983ರ ಶಾಸನಸಭೆ ಚುನಾವಣೆಯಲ್ಲಿ ತನ್ನ ಭದ್ರ ಕೋಟೆಗಳಾದ ಕರ್ನಾಟಕ-ಆಂಧ್ರಗಳಲ್ಲಿ ಅಧಿಕಾರ ಕಳೆದುಕೊಂಡ ನಂತರ ಧೃತಿಗೆಟ್ಟು ತನ್ನ ಹುಟ್ಟು ಗುಣ ಪ್ರದರ್ಶಿಸಲು ಪ್ರಾರಂಭ ಮಾಡಿದೆ. ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದ ಪಶ್ಚಿಮ ಬಂಗಾಲದ ಮತ್ತು ತ್ರಿಪುರದ ಎಡ ರಂಗ ಸರಕಾರಗಳನ್ನುರುಳಿಸುವುದಕ್ಕಾಗಿ "ಪಕ್ಷಾಂತರದ" ಆಟ ಸಾಧ್ಯವಿಲ್ಲೆಂದು ತಿಳಿದೇ ತನ್ನ ಪಕ್ಷದವರಿಂದ ಪಶ್ಚಿಮ ಬಂಗಾಲದಲ್ಲೂ, ತನ್ನ ಪಕ್ಷ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ಸಹಾಯದಿಂದ ತ್ರಿಪುರಾದಲ್ಲೂ ಚಳವಳಿ ನಡೆಸಿ ಮುಖ ಭಂಗ ಮಾಡಿಕೊಂಡಿದೆ. [illegible] ಎರಡು ರಾಜ್ಯಗಳಿಗೆ ಸಲ್ಲ ಬೇಕಾದ ಕೇಂದ್ರದ ಧನ ಸಹಾಯ ನಿಲ್ಲಿಸಿ, ಮಹಾ ಯೋಜನೆಗಳನ್ನು ನಿರಾಕರಿಸಿ ಅಸಹಾಯಕ ಪರಿಸ್ಥಿತಿಯನ್ನುಂಟು ಮಾಡಿದರೂ ಫಲಪ್ರದವಾಗಲಿಲ್ಲ.

ತನ್ನ ಹದಗೆಟ್ಟ ಆರ್ಥಿಕ ನೀತಿ ಕೆಡುತ್ತಿರುವ ಆಡಳಿತಾತ್ಮಕ, ರಾಜಕೀಯ ಸಾಮಾಜಿಕ ಪರಿಸ್ಥಿತಿಗಳಿಂದಾಗಿ ಜನರಲ್ಲಿ ಅಸಂತೃಪ್ತಿ ಬೆಳೆಯುತ್ತಿದ್ದು, ಸಿ. ಪಿ. ಐ. (ಎಂ), ಹಾಗೆಯೇ ಇತರ ಎಡ ಮತ್ತು ಪ್ರಜಾ ಪ್ರಭುತ್ವ ಶಕ್ತಿಗಳೆಲ್ಲ ಜನರೆನ್ನೆದುರಿಸುತ್ತಿರುವ ಜೀವಂತ ಸಮಸ್ಯೆಗಳ ಪರಿಹಾರಕ್ಕಾಗಿ ನಡೆಸುತ್ತಿರುವ ಐಕ್ಯ ಹೋರಾಟಕ್ಕೆ ಅಂಜಿ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತನಗೆ ಪ್ರತಿ ಕೂಲ ಅಭಿಪ್ರಾಯ ಮೂಡಿ ಬರಬಹುದೆಂದು ಮನಗಂಡ ಇಂದಿರಾಗಾಂಧಿ-ರಾಜೀವ ಶಕ್ತಿಗಳು ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರಕ್ಕೆ ಬಂದ ಸಿಕ್ಕಿಂ, ಕಾಶ್ಮೀರ, ಆಂಧ್ರ ರಾಜ್ಯಗಳಲ್ಲಿ ಪಕ್ಷಾಂತರ ಪಿಡುಗೆಬ್ಬಿಸಿ ಪ್ರಜಾ ಪ್ರಭುತ್ವದ ಕೊಲೆ ಮಾಡಲು ಪ್ರಾರಂಭಿಸಿದ್ದವು. ಸಿಕ್ಕಿಂ-ಕಾಶ್ಮೀರಗಳಲ್ಲಿಯ ಇವರ ನೀಚಕೃತ್ಯಕ್ಕೆ ಪ್ರಬಲವಾದ ವಿರೋಧಾಭಿಪ್ರಾಯ ಮೂಡಿಬಾರದಿರುವುದನ್ನು ಕಂಡು ಸ್ಫೂರ್ತಿಗೊಂಡ ಈ ನೀಚ ಶಕ್ತಿ, ಆಂಧ್ರದಲ್ಲಿ ಕೈ ಹಾಕಿದ ಕೂಡಲೇ ಇಡೀ ಜನ ಸಮೂಹದ ರೊಚ್ಚನ್ನೆದುರಿಸಬೇಕಾಯಿತು. ಅತ್ಯುಗ್ರವಾಗಿ ಬೆಳೆದು ಬಂದ ಜನ ಶಕ್ತಿಗೆ ಮಣಿಯ ಬೇಕಾಯಿತು. ದೇಶದ ಜನ ತಂತ್ರಕ್ಕೆ ತಾನುಣಲೆತ್ತಿಸಿದ ಕಹಿಗುಳಿಗೆಯನ್ನು ತಾನೇ ನುಂಗಬೇಕಾಯಿತು. ಶಾಸನ ಸಭೆಯಲ್ಲಿ ಬಲಾ ಬಲ ಪ್ರದರ್ಶಿಸಲು ರಾಮರಾವ್—ಭಾಸ್ಕರ ರಾವ್ ಅವರಿಗೆ ಕೊನೆಗೂ ಅವಕಾಶ ಮಾಡಿಕೊಡಬೇಕಾಯಿತು. ರಾಜ್ಯಪಾಲ ರಾಜಿನಾಮೆ ಕೊಡಬೇಕಾಯಿತು.

ಸಮಗ್ರ ಜನತೆಯ ಜೀವಾಳದ ಪ್ರಶ್ನೆಯಾದ ಪ್ರಜಾ ಪ್ರಭುತ್ವದ ಕೊಲೆಯಾದಾಗ ಅದರ ರಕ್ಷಣೆಗೆ ತಂತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಹೋರಾಡಿದರೆ ಜಯಗಳಿಸಬಹುದು, ಅಂಥ ಚಳುವಳಿಗೆ ಎಲ್ಲ ವರ್ಗದ ಜನತೆ ಸ್ವಯಂಸ್ಫೂರ್ತಿಯಿಂದ ಬೆಂಬಲನೀಡುತ್ತಾರೆಂಬ ಸಂಗತಿ ತುರ್ತು ಪರಿಸ್ಥಿತಿಯಲ್ಲೂ, ಎನ್.ಟಿ.ಆರ್. ಸರಕಾರವನ್ನು ಕಿತ್ತೊಗೆದಾಗಲೂ ತೋರಿಬಂದ ಮಹಾ ಪೂರದಿಂದ ಸ್ಪಷ್ಟವಾಗುತ್ತದೆ. ಏಕ ವ್ಯಕ್ತಿ ಸರ್ವಾಧಿಕಾರದ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಈ ಅಂಶ ಗಮನಿಸುವುದಗತ್ಯ.

ಜನತೆಗೆ ಜಯವಾಯಿತು ನಿಜ. ತನ್ನ ಬದುಕಿಗಾಗಿ ಘಟಸರ್ಪ ಇನ್ನೂ ವಿಷ ಕಾರುತ್ತಿದೆ. ಎಚ್ಚರದಿಂದಿರುವುದು ಅಗತ್ಯ.

ದೇಶ ದ್ರೋಹಿ ಚಟುವಟಿಕೆಗಾಗಿ ಎನ್.ಟಿ ಆರ್ ಅವರನ್ನು ಭಾರತ

[8ನೇ ಪುಟ ನೋಡಿ]

ರಘುಪತಿ ಎಚ್ಚರಿಕೆ

ಶಿಕ್ಷಕರನ್ನು ಶೋಷಣೆ ಮಾಡುತ್ತಿರುವ ವರ್ತನೆಯನ್ನು ಖಾಸಗೀ ಶಾಲೆಗಳ ಆಡಳಿತ ವರ್ಗದವರು ಒಂದು ವರ್ಷದೊಳಗೆ ತಿದ್ದಿಕೊಳ್ಳದಿದ್ದರೆ ಅವುಗಳನ್ನು ಸರ್ಕಾರವೇ ವಹಿಸಿಕೊಳ್ಳುವುದು ಎಂದು ಗರ್ಜಿಸಿದವರು ನೂತನ ಶಿಕ್ಷಣ ಮಂತ್ರಿ ರಘುಪತಿಯವರು. ಶಿಕ್ಷಕರ ದಿನಾಚರಣೆಯ ನಿಮಿತ್ತ ಏರ್ಪಡಿಸಿದ್ದ ಸಮಾರಂಭದಲ್ಲಿ ಈ ಅವಕಾಶ.

ಖಾಸಗಿ ವಿದ್ಯಾ ಸಂಸ್ಥೆಗಳೆಲ್ಲ ಹಿಂದಿನ ಸರ್ಕಾರದ ಮಂತ್ರಿಗಳನ್ನೆಲ್ಲ ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದವು. ಈಗಾದರೂ ಅವರ ಛಲ ಕುಂದಿಲ್ಲ. ಮಂತ್ರಿ ಮಂಡಲದ ಬಲ ಹೆಚ್ಚಿಲ್ಲ. ಆದ್ದರಿಂದ ಮಂತ್ರಿಗಳ ಗುಡುಗಿಗೆ ನಡುಗುವವರು ಕಡಿಮೆ.

ಖಾಸಗೀ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಕರಣವಾಗಬೇಕೆಂದು ನಮ್ಮೆಲ್ಲರ ಬೇಡಿಕೆಯಾಗಿದೆ. ಆದರೆ ವಿಷಯದಲ್ಲಿ ಕಾಂಗ್ರೆಸ್‌ನಂತೆಯೇ ಜನತಾ ಸರ್ಕಾರವೂ ಮೀನಮೇಷ ಧರಿಸಿದೆ. ಮೆಡಿಕಲ್-ಇಂಜಿನಿಯರಿಂಗ್ ಕಾಲೇಜುಗಳಲ್ಲಿಯ ಕ್ಯಾಪಿಟೇಷನ್ ಶುಲ್ಕ ರದ್ದು ಮಾಡುತ್ತೇವೆಂದು ಚುನಾವಣೆ ಘೋಷಣೆಯಲ್ಲಿ ಸಾರಿದ್ದರೂ ಕೂಡ ಅದಕ್ಕೆ ಐದು ವರ್ಷ ಕಾಲಾವಧಿ ನಿರ್ಧರಿಸಲಾಗಿದೆ. ಪೂರ್ಣ ಕ್ಯಾಪಿಟೇಷನ್ ಶುಲ್ಕದ ಮೇಲೆ ಆಧರಿತ ಎರಡು ಹೊಸ ಕಾಲೇಜುಗಳ (ಒಂದು ಮೆಡಿಕಲ್ ಮತ್ತೊಂದು ಇಂಜಿನಿಯರಿಂಗ್) ಸ್ಥಾಪನೆಗೆ ಅವಕಾಶ ಮಾಡಿ ಕೊಡಲಾಗಿದೆ.

ಶಾಲೆ—ಕಾಲೇಜುಗಳಲ್ಲಿ ಶಿಕ್ಷಕರ-ವಿದ್ಯಾರ್ಥಿಗಳ ಸುಲಿಗೆ ನಡೆಯುತ್ತಿದೆ. ಇವರಿಗಾಗುತ್ತಿರುವ ಅನ್ಯಾಯಗಳನ್ನು ಬಗೆ ಹರಿಸುವಲ್ಲಿ ಜನತಾ ಸರ್ಕಾರ ವಿಫಲ ಗೊಂಡಿದೆ. ಈ ಸರ್ಕಾರ ಅನುಸರಿಸುತ್ತಿರುವ ಖಾಸಗೀ ಮಾಲಕರ ಬಂಡವಾಳಶಾಹಿ ನೀತಿ ಪರವಾದ ನಿಲುವಿನಿಂದಾಗಿ ಶಿಕ್ಷಕರು ನಾನಾರೀತಿಯ ಅನ್ಯಾಯಗಳಿಗೊಳಗಾಗಬೇಕಾಗಿದೆ. ಶಿಕ್ಷಣ ಸಂಸ್ಥೆಗಳ ದುರಾಡಳಿತೆಯಿಂದಾಗಿ ವಿದ್ಯಾರ್ಥಿಗಳೂ ಕಷ್ಟ ಎದುರಿಸಬೇಕಾಗಿದೆ.

ರಾಚಯ್ಯನೇ ಆಗಲಿ, ರಘುಪತಿಯೇ ಆಗಲಿ ತಮ್ಮ ಗರ್ಜನೆಯಿಂದ ವಿದ್ಯಾ ಸಮಸ್ಯೆ ಬಗೆ ಹರಿಸಲಾರರೆಂಬುದನ್ನು, ಚಪ್ಪಾಳೆ ಮಾತ್ರ ತಟ್ಟಿಸಿಕೊಳ್ಳಬಹುದೆಂಬುದನ್ನೂ ತಿಳಿದುಕೊಳ್ಳಬೇಕು.

ಶಿಕ್ಷಣ ಪದ್ಧತಿಯಲ್ಲೇ ಮೂಲಭೂತ ಬದಲಾವಣೆಯಾಗಬೇಕು ಶಿಕ್ಷಕರಲ್ಲಿ-ಪಠ್ಯ ಪುಸ್ತಕಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ ಕಂಡುಬರಬೇಕು. ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಲ್ಲಿಯೂ—ಸರ್ಕಾರವೇ ಆಗಲಿ, ಖಾಸಗಿಯಾಗಲಿ-ಹೊಸ ಪೀಳಿಗೆಗೆ ನೀಡತಕ್ಕ ಶಿಕ್ಷಣದ ಪರಿಜ್ಞಾನವಿರಬೇಕು.

ಉತ್ತಮ ಸೇವೆಗಾಗಿ ಶಿಕ್ಷಕರಿಗೆ ಪಾರಿತೋಷಕವನ್ನು ಹಂಚಲಾಯಿತು. ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.

ಬಹು ಭಾಷಿಕ ಭಾರತ ದೇಶದಲ್ಲಿರುವ ಕರ್ನಾಟಕದಲ್ಲಿ ಅಲ್ಪ ಭಾಷಿಕರಿದ್ದಾರೆ. ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯುವ ಅವಕಾಶ ಅಲ್ಪ ಭಾಷಿಕರಿಗಿರಬೇಕು.. ಹಾಗಿರುವಾಗ ಇತ್ತೀಚೆಗೆ ರಾಜ್‌ಕುಮಾರ್ ಬೆಂಬಲಿಗರೂ ಕೆಲವು ಕಟ್ಟಾ ಕುರುಡು ಭಾಷಾ-ಭಿಮಾನಿಗಳೆಲ್ಲ ಅಲ್ಪ ಭಾಷಿಕರ ವಿರುದ್ಧ ಚಳುವಳಿ ನಡೆಸಿದಾಗ ಸರ್ಕಾರದಿಂದ ಪ್ರಶಸ್ತಿ ಪಡೆದ ಶಿಕ್ಷಕರು ಅವರ ರಕ್ಷಣೆ ಮಾಡಿದರೇ ? ರಾಜ್ಯದ ಹಲವಾರು ಕಡೆಗಳಲ್ಲಿ ಜಾತೀಯ ದಂಗೆ ನಡೆದಾಗ ಜಾತೀಯ ಸೌಹಾರ್ದತೆ-ಭ್ರಾತೃತ್ವತೆ ಕಾಪಾಡಲು ಈ ಶಿಕ್ಷಕರು ಪಣ ತೊಟ್ಟು ಪ್ರಯತ್ನಿಸಿದರೇ ? ಒಳಹೊಕ್ಕು ಈಕ್ಷಿಸಿದಲ್ಲಿ ಅಂಥ ಗುಣಗಳನ್ನು ಪಡೆದ ಶಿಕ್ಷಕರು ಸಿಗುವುದು ವಿರಳ.

ಇಡೀ ದೇಶದ ಐಕ್ಯತೆ ಅಲ್ಪ ಭಾಷಿಕರ ರಕ್ಷಣೆ, ಜಾತ್ಯಾತೀತತೆ ಮನೋಭಾವ, ಶಾಸ್ತ್ರೀಯ ಸಮಾಜವಾದದ ತಿಳುವಳಿಕೆ ಉಂಟಾಗುವ ರೀತಿಯಲ್ಲಿ ಶಿಕ್ಷಣ ಒದಗಿಸಬೇಕು. ಸರ್ಕಾರ ಹಾಗೂ ಶಿಕ್ಷಕರು ಅದರಲ್ಲಿ ಪ್ರಧಾನ ಪಾತ್ರ ವಹಿಸಬೇಕು.

ಶಿಕ್ಷಣ ಪದ್ಧತಿಯಲ್ಲಿ ಈ ರೀತಿಯ ಮೂಲಭೂತ ಬದಲಾವಣೆ ಬರುವಂತೆ ವಿದ್ಯಾ ಮಂತ್ರಿ ರಘುಪತಿಯವರು ಪ್ರಯತ್ನಿಸಲಿ. ಈ ಸಿದ್ಧಾಂತದ ಅನುಷ್ಠಾನಕ್ಕಾಗಿ ದುಡಿಯುವ ಶಿಕ್ಷಕರನ್ನು ಗುರುತಿಸಿ "ಶಿಕ್ಷಕರ ದಿನಾಚರಣೆ" ದಿವಸ ಪಾರಿತೋಷಕ ಹಂಚಲಿ ಎಂದು ನಮ್ಮ ಹಾರೈಕೆ.

ಕರ್ನಾಟಕ ರಾಜ್ಯದಲ್ಲಿ

ಕರ್ನಾಟಕದತ್ತ ವಕ್ರ ದೃಷ್ಟಿ

ಮಳೆಯ ಅಭಾವದಿಂದಾಗಿ ಹೆಚ್ಚು ಬೆಲೆ ತೆತ್ತು ಬಿತ್ತಿದ ಶೇಂಗಾ (ಕಡ್ಲೆ ಕಾಯಿ) ಬಾಜರ, ಜೋಳದ ಬೆಳೆಗಳೆಲ್ಲ ಕರ್ನಾಟಕ ರಾಜ್ಯದ ಬಹುಸಂಖ್ಯಾತ ಜಿಲ್ಲೆಗಳಲ್ಲಿ ಒಣಗುತ್ತಿರುವಾಗ, ರಾಗಿ, ಭತ್ತದ ಬೆಳೆಗಳು ಕೆಲವು ಪ್ರದೇಶದಲ್ಲಿ ಕಣ್ಣಿಗೂ ಕಾಣದಾಗಿರುವ, ಇಂಥ ಭೀಕರ ಪರಿಸ್ಥಿತಿಯಿಂದಾಗಿ ಗ್ರಾಮಾಂತರ ಪ್ರದೇಶದ ಜನತೆ ಕಂಗಾಲಾಗಿರುವಾಗ ನಮ್ಮ ರಾಜ್ಯದ ಕಾಂಗ್ರೆಸ್ ಮುಖಂಡರು ರಾಜಕೀಯ ಚದುರಂಗದಾಟದಲ್ಲಿ ಮಗ್ನರಾಗಿರುವುದು ನಿಜಕ್ಕೂ ನಾಚಿಕೆಗೇಡು.

ನೆರೆಯ ಆಂಧ್ರ ಪ್ರದೇಶದ ಶಾಸಕರನ್ನು ಅವರ ಇಚ್ಛೆಗೆ ವಿರುದ್ಧವಾಗಿ ರಾಜ್ಯಭವನದಲ್ಲಿ ಸೆರೆಯಾಳುಗಳನ್ನಾಗಿ ಇಟ್ಟುಕೊಂಡು ಜನತಂತ್ರದಲ್ಲಿ ಹೋಲಿಕೆಯಿಲ್ಲದ ಅಕೃತ್ಯವೆಸಗಿರುವ ರಾಮಕೃಷ್ಣ ಹೆಗಡೆ ಸರಕಾರವನ್ನು ವಜಾ ಮಾಡಬೇಕೆಂದು ಲೋಕಸಭಾ ಸದಸ್ಯ ನಂಜೇಗೌಡರು ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದಾರಂತೆ. ಒತ್ತೆಯಾಳುಗಳಂತೆ ಇಟ್ಟುಕೊಂಡಿರುವ ಆಂಧ್ರದ ಶಾಸಕರನ್ನು ಆರ್.ಎಸ್.ಎಸ್. ಮತ್ತು ಜನತಾ ಕಾರ್ಯಕರ್ತರಂತೆ ವೇಷ ಧರಿಸಿರುವ ಪುಂಡರು ಕಾಯುತ್ತಿದ್ದಾರೆಂದೂ ಆರೋಪಿಸಿದ್ದಾರಂತೆ.

ನಂಜೇಗೌಡರ ಈ ನಂಜಿನ ಆರೋಪದಿಂದಾಗಿ ಯಾರೂ ಕುಪಿತರಾಗುವ ಕಾರಣವಿಲ್ಲ. ಕಾಮಿಣಿ ರೋಗದವರಿಗೆ ಎಲ್ಲವೂ ಹಳದಿಯಾಗಿಯೇ ಕಾಣುತ್ತದಲ್ಲ ! ಸಂವಿಧಾನವನ್ನು ಪ್ರಜಾಪ್ರಭುತ್ವ ನೀತಿಯನ್ನೂ ಗಾಳಿಗೆ ತೂರಿ ತನ್ನ ಸರ್ವಾಧಿಕಾರಿ ನೀತಿಯಲ್ಲೇ ಆಡಳಿತ ನಡೆಸುತ್ತಿರುವ ಇಂದಿರಾಗಾಂಧಿಯ ಚರಣ ಸೇವಕ ನಂಜೇಗೌಡರಿಗೆ ಎಲ್ಲವೂ ಹಳದಿಯಾಗಿಯೇ ಕಾಣಿಸುತ್ತಿದೆ. ತನ್ನ ಗುರುದೇವಿಯಂತೆಯೇ ಇತರರೂ ವರ್ತಿಸುತ್ತಾರೆಂಬುದೇ ಅವರ ವಾದ. ಆದರೆ ದೇಶದ ಜನತೆ ಜಾಗೃತರಾಗಿದ್ದಾರೆ. ಅವರಿಗೆ ಕಾಮಿಣಿ ರೋಗದ ಬಾಧೆ ಇಲ್ಲ. ಅವರೆಲ್ಲ ಇಂದಿರಾಗಾಂಧಿಯ ಕರಾಳ ರೂಪವನ್ನು ಕಂಡಿದ್ದಾರೆ. ಆಕೆಯ ನಾಚಿಕೆಗೇಡಿ ನೀತಿಯ ವಿರುದ್ಧ ಬಂಡೆದ್ದಿದ್ದಾರೆ. ಆಕೆಯ ಅಧಿಕಾರವನ್ನು ಮಣ್ಣು ಮುಕ್ಕಿಸಲು ಹೊರಟಿದ್ದಾರೆಂಬ ದೃಶ್ಯ ನಂಜೇಗೌಡರಿಗೆ ಕೆಂಪಾಗಿ ಕಾಣದೆ ಹಳದಿಯಾಗಿಯೇ ಕಾಣಿಸುತ್ತಿರುವಂತೆ ಕಂಡು ಬರುತ್ತದೆ. ಪಾಪ ! ನಂಜೇಗೌಡರ ದೃಷ್ಟಿದೋಷಕ್ಕೆ ಡಾ|| ಮೋದಿಯವರನ್ನು ಕರೆಸೋಣ. ಪಟ್ಟಿ ಹಾಕಿ ಸಹಾಯ ಮಾಡೋಣ.

ನಂಜೇಗೌಡರ ಆಲಾಪಕ್ಕೆ ತಂಬೂರಿ ಬಾರಿಸಲು ಮಾಜಿ ಮುಖ್ಯಮಂತ್ರಿ ಗುಂಡೂರಾಯರಿಗೆ ಹೇಳಿ ಕೊಳ್ಳಲಾಗುವುದಂತೆ. ಇಂದಿರಾಗಾಂಧಿಯ ಹಿರಿಯ ಮಗ ಸಂಜಯಗಾಂಧಿ ತುರ್ತು ಪರಿಸ್ಥಿತಿಯ ಕಾಲದಲ್ಲಿ ತಾಯಿಗೆ ಕಪಾಳ ಮೋಕ್ಷ ಒದಗಿಸಿದ್ದನಂತೆ. ಈಗ ಇಂದಿರಾಗಾಂಧಿಯ ಸಾಮ್ರಾಜ್ಯ ಕುಸಿದು ಬೀಳುತ್ತಿರುವಾಗ ಎರಡನೇ ಮಗ ವಿಮಾನ ಚಾಲಕ ರಾಜೀವ ಗಾಂಧಿ ಕಪಾಳ ಮೋಕ್ಷದಂಥ ಮಹಾಪಾಪಕ್ಕೆ ಕೈಹಾಕದೆ ನವ ಚೈತನ್ಯದ ಹಾದಿ ಹಿಡಿದಿದ್ದಾರಂತೆ. ಬಿಹಾರ - ಉತ್ತರ ಪ್ರದೇಶಗಳಲ್ಲಿಯ ತಮ್ಮ ಪಕ್ಷದೊಳಗಿನ ಆಂತರಿಕ ಜಗಳ ಪರಿಹರಿಸಲು ಅಸಮರ್ಥವಾದ ಕಾಂಗ್ರೆಸ್ ಮುಖಂಡರನ್ನು, ಕೇಂದ್ರ ಮಂತ್ರಿಗಳನ್ನು ರಾಜ್ಯದ ಮುಖ್ಯಮಂತ್ರಿಗಳನ್ನಾಗಿ ನೇಮಿಸಿದ್ದರು ಹಾಗೆಯೇ ಕರ್ನಾಟಕದಲ್ಲಿಯೂ ಹೆಗಡೆ ಸರಕಾರ ಉರುಳುತ್ತದೆಂಬ ಹಗಲು ಕನಸು ಕಂಡ ದಿಲ್ಲಿ ರಾಜರು ಕೇಂದ್ರದಲ್ಲಿಯ ಕಾರ್ಮಿಕ ಮಂತ್ರಿ ವೀರೇಂದ್ರ ಪಾಟೀಲರನ್ನು ಕೆ.ಪಿ.ಸಿ.ಸಿ. ಅಧ್ಯಕ್ಷರನ್ನಾಗಿ ಮಾಡುತ್ತಾರೆಂಬ ಸುದ್ದಿ ಹರಡಿತ್ತು. ಇಪ್ಪತ್ತು ತಿಂಗಳು ತುಂಬಿದ ಬಸುರಿಯ ಗರ್ಭಪಾತ ಮಾಡಿಸುವಲ್ಲಿ ಪಾಟೀಲರು ವಿಫಲಗೊಂಡಿರುವುದನ್ನು ಮನದಟ್ಟು ಮಾಡಿಕೊಂಡ ರಾಜೀವ ಗಾಂಧಿ ಸಂಘಟನೆ ಮತ್ತು ಆಡಳಿತ ಯಂತ್ರದಲ್ಲಿ ತನ್ನ ಪ್ರಾಬಲ್ಯ ಬೆಳೆಸುತ್ತಿದ್ದಾನೆಂದೂ, ಬಿಹಾರ-ಉತ್ತರ ಪ್ರದೇಶಗಳಲ್ಲಿಯ ಮುಖ್ಯಮಂತ್ರಿಗಳ ಬದಲಾವಣೆಗೆ ಅವನೇ ಕಾರಣ ಭೂತನಾಗಿದ್ದು, ಆಂಧ್ರದಲ್ಲಿಯ ತನ್ನ ಸಾಹಸಕ್ಕೆ ಪ್ರತಿಕೂಲ ವಾತಾವರಣ ಉಂಟಾದರೂ, ಕರ್ನಾಟಕದಲ್ಲಿ ಜನತಾ ಸರಕಾರ ಉರುಳಿಸಲು ಗುಂಡೂರಾಯರಿಂದ ಗುಂಡು ಹಾರಿಸುವ ಪ್ರಯತ್ನ ನಡೆದಿದೆಂದೂ ತಿಳಿದು ಬರುತ್ತದೆ. ಇದಕ್ಕೆ ಕೇರಳದ ಮುಖ್ಯಮಂತ್ರಿ ಕರುಣಾಕರನ್ ಹಾಗೆಯೇ ದಕ್ಷಿಣ ರಾಜ್ಯಗಳ ಮೇಲ್ವಿಚಾರಣೆ ಮಾಡುತ್ತಿದ್ದ ಮೂಪನಾರ್ ಬದಲಿ ನೇಮಿಸಲ್ಪಟ್ಟ ಆಂತೋನಿಯವರೂ ಹೆಗಡೆ ಸರಕಾರ ಉರುಳಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆಂದೂ ತಿಳಿದು ಬರುತ್ತದೆ.

ಸಿಕ್ಕಿಂ, ಕಾಶ್ಮೀರ ಸರಕಾರಗಳನ್ನು ಉರುಳಿಸಿದಾಗ ಜನತೆಯ ಸಾಕಷ್ಟು ಪ್ರತಿರೋಧವನ್ನು ಕಾಣದ ಕಾಂಗ್ರೆಸ್ ಮುಖಂಡತ್ವ ಆಂಧ್ರದಲ್ಲಿ ಅದೇ ತಂತ್ರ ನಡೆಸಿದಾಗ ಬಿರುಗಾಳಿಯನ್ನೆದುರಿಸಬೇಕಾಗಿ ಬಂದಿರುವುದನ್ನು ಕಂಡು ಹೆಗಡೆ ಸರಕಾರದ ವಿರುದ್ಧ ಧಾಳಿ ಮಾಡಲು ಹೊಸ ತಂತ್ರ ಹೂಡುತ್ತಿರುವಂತೆ ಕಂಡು ಬರುತ್ತದೆ. ಆಂಧ್ರದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆದಾಗ ತ್ರಿಪುರಾ, ಪಶ್ಚಿಮ ಬಂಗಾಲ, ಮಹಾರಾಷ್ಟ್ರ, ಕೇರಳ, ತಮಿಳನಾಡು, ಆಂಧ್ರ, ಕಾಶ್ಮೀರಗಳಲ್ಲಿ ಪರಿಣಾಮಕಾರಿ ಪ್ರತಿಭಟನೆ ನಡೆದಂತೆ ಹಿಂದೀ ಪ್ರದೇಶದಲ್ಲಿ ಜನರ ರೊಚ್ಚು ಎದು ಕಾಣಲಿಲ್ಲ.

ಇಂದಿನ ರಾಜಕೀಯದಲ್ಲಿ ಎಡಪಕ್ಷ-ಶಕ್ತಿಗಳ ಪಾತ್ರ ಪ್ರಧಾನವಾಗಿದೆ. ಅದನ್ನು ಬೆಳೆಸಿದರೆ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ.

ಜನತಾ ಪಕ್ಷದ ಹೊಸ ಅಧ್ಯಕ್ಷರು

ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಕಾಂಗ್ರೆಸ್ಏತರ ಸರಕಾರಗಳನ್ನೆಲ್ಲ ಉರುಳಿಸಿ ಜಯಭೇರಿ ಹೊಡೆಯಬೇಕೆಂಬ ದೃಢ ನಿರ್ಧಾರದಿಂದ ಇಂದಿರಾ ಗಾಂಧಿ ಮುನ್ನುಗ್ಗುತ್ತಿರುವಾಗ, ಕರ್ನಾಟಕದ ಹೆಗಡೆ ಸರಕಾರ ಉರುಳಿಸಲು ಹೊಸ ತಂತ್ರಗಳು ಪೋಣಿಸಲ್ಪಡುತ್ತಿರುವಂತೆಯೇ ಜನತಾ ಪಕ್ಷದ ರಾಜ್ಯ ಅಧ್ಯಕ್ಷರನ್ನಾಗಿ ದೇವೇಗೌಡರನ್ನು ಒಮ್ಮತದಿಂದ ಆಯ್ಕೆ ಮಾಡಿರುವುದು ಮಹತ್ವದ ಘಟನೆ.

ಕರ್ನಾಟಕದಲ್ಲಿ ಜನತಾ ಪಕ್ಷ ಹೇಳಿಕೊಳ್ಳುವಂಥ ಸಂಘಟನೆ ಹೊಂದಿಲ್ಲ. ಕಾಂಗ್ರೆಸ್ಸಿನಂತೆಯೇ ಜನತಾ ಪಕ್ಷದಲ್ಲಿಯೂ ಒಕ್ಕಲಿಗ-ಲಿಂಗಾಯತ ಗುಂಪುಗಳಷ್ಟೇ ಅಲ್ಲದೆ, ಲಿಂಗಾಯತರಲ್ಲಿ ಬಣಜಿಗ-ಕುಡುಒಕ್ಕಲಿಗ, ಪಂಚಮಸಾಲಿಗಳಂತ ಒಳಗುಂಪುಗಳೂ ಪುಟಿದೇಳುತ್ತಿರುವುದು ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಅಡ್ಡಿಯಾಗಿದೆ. ರಾಮಕೃಷ್ಣ ಹೆಗಡೆಯವರನ್ನು ಬಿಟ್ಟರೆ ಪಕ್ಷದಲ್ಲಾಗಲೀ ಆಡಳಿತದಲ್ಲಾಗಲೀ ಪ್ರಭಾವ ಬೀರುವ ಮುಖಂಡತ್ವ ಮತ್ತೊಂದಿಲ್ಲ ಜನತಾ ಪಕ್ಷಕ್ಕೆ. ಈಗ ಮಂತ್ರಿಯಾಗಿರುವ ಹಿಂದಿನ ಅಧ್ಯಕ್ಷ ಮಂಜುನಾಥ ತಮ್ಮ ಸ್ಥಾನದಲ್ಲಿ ನಿರ್ವೀರ್ಯರಾಗಿದ್ದರು. ಮಂತ್ರಿ ಪದ ಬಿಟ್ಟುಕೊಟ್ಟ ದೇವೇಗೌಡರು ಈಗ ಅಧ್ಯಕ್ಷರಾಗಿದ್ದಾರೆ. ಅವರು ಆ ಸ್ಥಾನದಿಂದ ಪಕ್ಷಕ್ಕೆ ಚೈತನ್ಯ ತುಂಬಬೇಕಾಗಿದೆ. ದೇವೇಗೌಡರೇನೋ ಚೈತನ್ಯಶಾಲಿ ವ್ಯಕ್ತಿ. ಆದರೆ ಇಷ್ಟು ವರ್ಷ ಅವರು ಒಂದು ಗುಂಪಿನ ಮುಖಂಡರಾಗಿಯೇ ಬೆಳೆದು ಬಂದಿದ್ದರಲ್ಲದೆ ಜನತಾ ಪಕ್ಷದ ರಾಜ್ಯ ಮುಖಂಡರಾಗಿ ಅಲ್ಲ. ಮುಖ್ಯಮಂತ್ರಿ ಪದದ ಮೇಲೆ ಆಸೆಗಣ್ಣಿಟ್ಟವರ ಪೈಕಿ ಇವರೊಬ್ಬರು. ಗುಂಡೂರಾವ್ ಸರಕಾರವಿದ್ದಾಗ ವಿರೋಧ ಪಕ್ಷದಲ್ಲಿದ್ದ ದೇವೇಗೌಡರಾಗಲೀ, ಬೊಮ್ಮಾಯಿಯವರಾಗಲೀ ಜನತಾ ಪಕ್ಷಕ್ಕೆ ಒಳ್ಳೆ ಹೆಸರು ತಂದಿಲ್ಲ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೆಯೇ ಇತರ ಎಡಪಕ್ಷಗಳ ಮುಖಂಡರು ಅಧಿಕಾರಕ್ಕಾಗಿ ಪಕ್ಷ ಕಟ್ಟುತ್ತಿಲ್ಲ ಸಿದ್ಧಾಂತ-ಕಾರ್ಯಕ್ರಮದ ತಳಹದಿಯಲ್ಲಿ ಚಳುವಳಿಗಳ ಮೂಲಕ ತಮ್ಮ ಪಕ್ಷ ಸಂಘಟನೆ ಮಾಡುತ್ತಾರೆ. ಆದರೆ ಕಾಂಗ್ರೆಸ್ಸಿನಂತೆಯೇ ಜನತಾ ಪಕ್ಷಕ್ಕೆ ಬಂದವರೆಲ್ಲ ಒಂದಲ್ಲೊಂದು ಅಧಿಕಾರ ಪದವಿ ಪಡೆಯುವ ಆಸೆ ಹೊಂದಿದವರಾಗಿರುತ್ತಾರೆ.

1983 ರಲ್ಲಿ ಗುಂಡೂರಾವ್ ಆಡಳಿತೆಗೆ ಬೇಸತ್ತ ಜನತೆ ಜನತಾ, ಕ್ರಾಂತಿರಂಗ, ಎರಡೂ ಕಮ್ಯೂನಿಸ್ಟ್ ಪಕ್ಷಗಳ ರಂಗಕ್ಕೆ ಮತ ನೀಡಿ ಜನತಾ ಪಕ್ಷ ಅಧಿಕಾರಕ್ಕೆ ಬರುವಂತೆ ಮಾಡಿತೆಂಬುದನ್ನು ಜನತಾ ಪಕ್ಷ ಮರೆತಂತೆ ಕಂಡು ಬರುತ್ತದೆ. ಯಾಕೆಂದರೆ ಅಧಿಕಾರ ವಹಿಸಿಕೊಂಡ ನಂತರವೂ, ಅವರ ಸರ್ಕಾರವನ್ನುರುಳಿಸಲು ಕಾಂಗ್ರೆಸ್ ಪ್ರಯತ್ನ ಮಾಡುತ್ತಿರುವಾಗಲೂ ಜನತಾದೊಳಗಿನ ಗುಂಪುಗಾರಿಕೆಯ ಪೀಕಲಾಟ ಕಡಿಮೆಯಾಗಿದ್ದಿಲ್ಲ. ಈಗಲೂ ಇಂದಿರಾ ಗಾಂಧಿ ಹೊಸ ತಂತ್ರಗಳನ್ನು ಹೂಡುತ್ತಿರುವಾಗ ಜನತಾ ಪಕ್ಷಕ್ಕೆ ಬಲಿಷ್ಟವಾದ ಒಮ್ಮತದ ಮುಖಂಡತ್ವ ಅಗತ್ಯವೆಂಬ ಅರಿವು ಉಂಟಾದಂತೆ ಕಂಡುಬರುವುದಿಲ್ಲ

ಕರ್ನಾಟಕದಲ್ಲಿ ಪ್ರಜಾಪ್ರಭುತ್ವದ ಮೌಲ್ಯ ಉಳಿಸಿ ಸರ್ವಾಧಿಕಾರಿ ಶಕ್ತಿ ತಲೆ ಎತ್ತದಂತೆ ಮಾಡುವ ಇಚ್ಛೆವುಳ್ಳ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಜನತಾ ಪಕ್ಷ ತಮ್ಮ ಗುಂಪುಗಾರಿಕೆಗಳನ್ನು ಬಿಟ್ಟು ಸರ್ವಾಧಿಕಾರಿ ಇಂದಿರಾ ಗಾಂಧಿಯ ವಿರುದ್ಧದ ಹೋರಾಟದಲ್ಲಿ ಸಹಭಾಗಿಗಳಾಗಿ ಬರಬೇಕೆಂದು ಆಶಿಸುತ್ತವೆ. ದೇವೇಗೌಡರು ಅಂಥ ಪಾತ್ರ ಧಾರಿಗಳಾಗಲು ಮುಂದೆಬರಲಿ.

ಕೈಗಾರಿಕೆಗಳಲ್ಲಿ ನಿರಂತರ ಹಾನಿ

ಕರ್ನಾಟಕದಲ್ಲಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳೆಲ್ಲ ಅಪಾರ ನಷ್ಟವನ್ನೆದುರಿಸುತ್ತಿವೆಂದೂ, ಭದ್ರಾವತಿ ಕಾರ್ಖಾನೆಯೊಂದೇ ರೂ 26 ಕೋಟಿಗಿಂತಲೂ ಹೆಚ್ಚು ನಷ್ಟವನ್ನನುಭವಿಸುತ್ತಿದೆಂದೂ ಹಿಂದಿನ ಕೈಗಾರಿಕಾ ಮಂತ್ರಿ ಎಸ್. ಆರ್. ಬೊಮ್ಮಾಯಿಯವರು ಹೇಳುತ್ತಲೇ ಬಂದಿದ್ದಾರೆ ಭದ್ರಾವತಿ ಕಾರ್ಖಾನೆಯನ್ನು ಉಕ್ಕು ಪ್ರಾಧಿಕಾರಕ್ಕೆ ಒಪ್ಪಿಸುವುದೊಂದೇ ಮಾರ್ಗವೆಂದು ಹೇಳಿ ತನ್ನ ಬುದ್ಧಿಮತ್ತೆಯ ಅಸಾಮರ್ಥ್ಯವನ್ನು ತೋರ್ಪಡಿಸಿದ್ದಾರೆ.

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮಂತ್ರಿ ಪ್ರಕಾಶ ಅವರು ಆ ಸಂಸ್ಥೆ ಕೋಟ್ಯಾವಧಿ ರೂಪಾಯಿ ಹಾನಿ ಅನುಭವಿಸುತ್ತಿದೆಂದು ಹೇಳುತ್ತಲೇ ಬಂದಿದ್ದರು. ಆ ಸಂಸ್ಥೆಯ ಅಧ್ಯಕ್ಷರಾದ ಕೆಂಪೇಗೌಡರೂ ಅದೇ ಹಾಡನ್ನೇ ಹಾಡುತ್ತಿದ್ದಾರೆ. ಹಿಂದಿನ ವರ್ಷಗಳಲ್ಲಿ ರೂ 45 ಕೋಟಿ ಹಾನಿಯಾಗಿದ್ದು 1983-84 ರ ಹಿಂದೇ ವರ್ಷದಲ್ಲಿ ರೂ 16 ಕೋಟಿ ಲುಕ್ಸಾನಾಗಿದೆಂದು ಹೇಳಿದ್ದಾರೆ.

ಜನತಾ ಸರಕಾರ ಅಧಿಕಾರಕ್ಕೆ ಬಂದು 20 ತಿಂಗಳಾಯಿತು. ಕೈಗಾರಿಕೆಯ ಮತ್ತು ರಸ್ತೆ ಸಾರಿಗೆಯ ಮಂತ್ರಿಗಳು ಹಾನಿಗಾಗಿ ಕಣ್ಣೀರು ಸುರಿಸುತ್ತಾರಲ್ಲದೆ, ಅದನ್ನು ತಡೆ ಹಿಡಿದು ಲಾಭದ ದಾರಿ ಹಿಡಿಯುವಂಥ ಯಾವ ಸೂಚನೆಯ ಕುರಿತೂ ವಿಚಾರ ಮಾಡದಿರುವುದನ್ನು ನೋಡಿದಾಗ ಆ ಮಂತ್ರಿಗಳ ಹಾಗೆಯೇ ಜನತಾ ಸರಕಾರದ ವೈಫಲ್ಯವನ್ನು ತೋರಿಸಿಕೊಡುತ್ತದೆ.

ಖಾಸಗೀ ಬಂಡವಲದಾರರು ತಮ್ಮ ತಮ್ಮ ಕೈಗಾರಿಕೆಗಳಲ್ಲಿ ಅಪಾರ ಲಾಭ ಗಳಿಸುತ್ತಿರುವಾಗ ಆ ಲಾಭದಿಂದ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುತ್ತಿರುವಾಗ ಜನತಾ ಸರಕಾರ ತನ್ನ ಹಿಡಿತದಲ್ಲಿರುವ ಕೈಗಾರಿಕೆಗಳಲ್ಲಿ ಸುಧಾರಣೆ ತಂದು ಹಾನಿಯನ್ನು ತಡೆ ಹಿಡಿದು ಲಾಭದತ್ತ ಸಾಗುವುದು ಅತ್ಯಗತ್ಯವಲ್ಲವೇ ? ಕೈಗಾರಿಕೆಗಳ ದುಸ್ಥಿತಿಯನ್ನು ಸುಧಾರಿಸಲು ಅಲ್ಲಿಯ ಕಾರ್ಮಿಕರ ಜೊತೆಯಲ್ಲಿ ಹಾಗೆಯೇ ಕಾರ್ಮಿಕ ಸಂಘಗಳ ಮುಖಂಡರೊಡನೆ ಚರ್ಚೆ ಮಾಡಿ ಪರಿಹಾರ ಕಂಡು ಹಿಡಿಯುವ ಮಾರ್ಗವನ್ನು ಜನತಾ ಮಂತ್ರಿಗಳು ಅನುಸರಿಸುವುದು ಅತ್ಯಗತ್ಯ. ಕೈಗಾರಿಕೆಗಳಲ್ಲಿ ಕಾರ್ಮಿಕರ ಪಾತ್ರ ಪ್ರಧಾನವೆಂಬುದನ್ನು ಇವರು ಒಪ್ಪಿಕೊಳ್ಳದೆ ಬರೀ ಮೇಲಧಿಕಾರಿಗಳ ಮೇಲೆಯಷ್ಟೇ ಅವಲಂಬಿಸಿದರೆ ಗಂಡಾಂತರ ಪರಿಸ್ಥಿತಿಯನ್ನೆದುರಿಸಬೇಕಾಗಿ ಬರುತ್ತದೆ. ಆದ್ದರಿಂದ ಕೈಗಾರಿಕಾ ಮತ್ತು ರಸ್ತೆ ಸಾರಿಗೆ ಮಂತ್ರಿಗಳು ಕಾರ್ಮಿಕ ಮುಖಂಡರನ್ನು ಕರೆಸಿ ಆಡಳಿತ ಸುಧಾರಣೆಯ ಕುರಿತು ಚರ್ಚೆ ಮಾಡಬೇಕಾಗಿರುವುದು ತುರ್ತು ಅಗತ್ಯವಾಗಿದೆ. ಜನತಾ ಮಂತ್ರಿಗಳು ಇದನ್ನು ಗಮನಿಸುವರೇ ?

— ಎನ್ಕೆ

ಶಾಖೆ ರಚನೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಕಂಪ್ಲಿ ನಗರದಲ್ಲಿ ಎಸ್.ಎಫ್.ಐ. ನೂತನ ಘಟಕ ಆರಂಭವಾಗಿದೆ. ಸದ್ಯ ಸಂಘಟನಾ ಸಮಿತಿ ರಚಿಸಲಾಗಿದ್ದು ಕಾಂ|| ಪಾಂಡುರಂಗ ಅವರು ಸಂಚಾಲಕರಾಗಿದ್ದಾರೆ.

ದಿನಾಂಕ 23 ರಂದು ಕಂಪ್ಲಿಯ ಜೂನಿಯರ್ ಕಾಲೇಜಿನಲ್ಲಿ ಎಸ್.ಎಫ್.ಐ. ಬಗ್ಗೆ ಅಧ್ಯಯನ ತರಗತಿ ಬಗ್ಗೆ ಜಿಲ್ಲಾ ಕಾರ್ಯದರ್ಶಿ ಕಾ. ಗುರುಶಾಂತ್ ವಿವರಿಸಿದರು. ಸದಸ್ಯತ್ವ ಚಳುವಳಿ ಮುಂದುವರಿದಿದೆ.

ಯೋಜನೆಯಲ್ಲಿ ರಾಜಕಾರಣ

1984-85ರ ಹಣ ಕಾಸಿನ ಕಾಲಾವಧಿ ಮುಗಿಯುವಾಗ ಯೋಜನೆಯ 34 ವರ್ಷಗಳು ಮುಕ್ತಾಯವಾಗುತ್ತವೆ. ಇಷ್ಟು ದೀರ್ಘಾವಧಿಯಲ್ಲಿ ಆರು ಪಂಚ ವಾರ್ಷಿಕ ಯೋಜನೆಗಳ ಕಾರ್ಯ, ಮೂರು ವರ್ಷಗಳ "ಯೋಜನಾ ವಿರಾಮ" (66 ರಿಂದ 69 ರ ವರೆಗೆ) 1978-81 ಮೂರು ವರ್ಷ "ಪರ್ಯಾಯ ಯೋಜನೆ" ಯನ್ನು ಕಂಡಿದ್ದೇವೆ. ನಮ್ಮ ದೇಶದ ಯೋಜನೆ ಎಂಥ ಗಂಭೀರ ಪರಿಸ್ಥಿತಿಯಲ್ಲಿ ಮುಂದುವರಿದಿದೆಂಬುದು ಕಂಡು ಬರುತ್ತದೆ.

ಮೂರು ವರ್ಷಗಳ "ಯೋಜನಾ ವಿರಾಮ" ಅನುಸರಿಸ ಬೇಕಾದರೆ ಆ ಕಾಲದಲ್ಲಿ ದೇಶ ಗಂಭೀರವಾದ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿತ್ತು. ರಾಜ್ಯಗಳ ಚುನಾವಣೆ ನಡೆದಾಗ ಹಲವಾರು ಶಾಸನ ಸಭೆಗಳಲ್ಲಿ ಕಾಂಗ್ರೆಸ್ ಸೋತು ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದಿದ್ದವು. ಎರಡು ರಾಜ್ಯಗಳಲ್ಲಂತೂ ಎಡ ಪಕ್ಷಗಳು ಆಳುವಂತಾಯಿತು. ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆ 1968 ರಲ್ಲಿ ಸೇರಿದಾಗ ಕೇರಳದ ಮುಖ್ಯಮಂತ್ರಿಯಾಗಿದ್ದ ಇ. ಎಂ. ಎಸ್. ನಂಬೂದಿರಿಪಾಡ್ ಅವರು ಎಡ ವಿಚಾರದ ಬದ್ಧ ಧೋರಣೆಯನ್ನು ಮಂಡಿಸಿದರು. ಅದೇ ಸಮಯದಲ್ಲಿ ಒರಿಸ್ಸಾದ ಸ್ವತಂತ್ರ ಪಕ್ಷದ ಮುಖ್ಯ ಮಂತ್ರಿಯಾಗಲಿ, ತಮಿಳುನಾಡಿನ ಡಿ. ಎಂ. ಕೆ. ಮುಖ್ಯಮಂತ್ರಿಯಾಗಲೀ ಬದ್ಧ ನೀತಿ ನಿರೂಪಣೆ ಮಂಡಿಸಿದ್ದಿಲ್ಲ.

"ಪರ್ಯಾಯ ಯೋಜನೆ" ಯನ್ನು ರೂಪಿಸಿ, ಅನಂತರ ಅದನ್ನು ಬಿಟ್ಟುಕೊಟ್ಟ ಜನತಾ ಸರಕಾರ ಬಿದ್ದು ಹೋಯಿತು. ಅನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಆರನೇ ಯೋಜನೆಯನ್ನು ಸಿದ್ಧ ಪಡಿಸಿದಾಗ, ಎಡ ವಿಚಾರ ಧಾರೆಯ ಪಶ್ಚಿಮ ಬಂಗಾಲ, ತ್ರಿಪುರ, ಕೇರಳ ಸರಕಾರಗಳು ಕಾಂಗ್ರೆಸ್ ನಿರೂಪಣೆಯನ್ನು ವಿರೋಧಿಸಿ, ಎಡ ಪಂಥೀಯ ವಿಚಾರಧಾರೆಯನ್ನು ಮಂಡಿಸಿದವು.

ಆಶ್ಚರ್ಯದಾಯಕ ಹೇಳಿಕೆ

ನಿಜ ಸಂಗತಿ ಹೀಗಿರುವಾಗ, ಜುಲೈ 12 ರಂದು ರಾಷ್ಟ್ರೀಯ ಅಭಿವೃದ್ಧಿ ಸಭೆ ನಡೆಯುತ್ತಿದ್ದಾಗ, ಕಾಶ್ಮೀರದ ಸರಕಾರವನ್ನು ಅನ್ಯಾಯವಾಗಿ ಉರುಳಿಸಿರುವುದನ್ನು ಖಂಡಿಸಲು ನಾಲ್ಕು ಕಾಂಗ್ರೆಸ್ ವಿರೋಧ ಮುಖ್ಯಮಂತ್ರಿಗಳು ಪ್ರತಿಭಟಿಸಿದಾಗ, ಆ ಸಭೆಯ ಅಧ್ಯಕ್ಷೆಯಾಗಿದ್ದ ಇಂದಿರಾ ಗಾಂಧಿ ತಕರಾರು ಮಾಡಿರುವುದು ಆಶ್ಚರ್ಯಕರ. "ರಾಜಕೀಯೇತರವಲ್ಲದ ಸಂಸ್ಥೆ" ಯಾದ ಮಂಡಲದ ಸಭೆಯಲ್ಲಿ ಅಂಥ "ರಾಜಕೀಯ ಬೆಳವಣಿಗೆ"ಗಳಿಗೆ ಸ್ಥಾನವಿಲ್ಲೆಂದು ಹೇಳಿದ್ದಾರೆ.

ಈ ನಾಲ್ಕು ಕಾಂಗ್ರೆಸ್ಸೇತರ ಮುಖ್ಯ ಮಂತ್ರಿಗಳ ಗೈರು ಹಾಜರಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಲ ಸ್ವೀಕರಿಸಿದ "ಏಳನೆ ಪಂಚ ವಾರ್ಷಿಕ ಯೋಜನೆಯ ಸ್ವರೂಪ" ಎಂಬ ದಸ್ತಾವೇಜಿನಲ್ಲಿ ಯೋಜನೆ ಮತ್ತು ರಾಜಕೀಯಕ್ಕೆ ಸಂಬಂಧ ಕಲ್ಪಿಸಲಾಗಿರುವುದು ಸ್ಪಷ್ಟ ಕಂಡು ಬರುತ್ತದೆ. "ಯೋಜನೆಯ ಯಶಸ್ಸು ಮಾನವ ಸಂಬಂಧಕ್ಕೆ ಹೊಂದಿಕೊಂಡಿದೆ. ಯೋಜನೆ ಹೊಂದಿರುವ ಸಾಮಾಜಿಕ ಧ್ಯೇಯಗಳಿಗೆ ಆಡಳಿತೆಯ ಮತ್ತು ಕಾರ್ಯಗಾರದ ಕರ್ತೃಗಳು ಸಾಮೀಪ್ಯ ಹೊಂದಿರಬೇಕಾಗಿದೆ. ಎಲ್ಲಾ ಯೋಜನೆಗಳನ್ನು ಜ್ಯಾರಿಯಲ್ಲಿ ತರಬೇಕಾದರೆ ಹೆಚ್ಚಿನ ದಕ್ಷತೆ ಮತ್ತು ಪ್ರಾಮಾಣಿಕತೆ ಅತಗತ್ಯ" ಎಂದು ಆ ದಸ್ತಾವೇಜಿನಲ್ಲಿ ಸ್ಪಷ್ಟೀಕರಿಸಲಾಗಿದೆ.

"ಕನಿಷ್ಠ ಅವಶ್ಯಕತೆಗಳ ಕುರಿತಾದರೂ ಪ್ರದೇಶಿಕ ಮಟ್ಟದಲ್ಲಿ ಸರಿಯಾದ ಅಭಿವೃದ್ಧಿ ಹಾಗೂ ಬಡತನ ನಿವಾರಣಾ ಕಾರ್ಯ ಕ್ರಮಗಳು ಯಶಸ್ವಿಯಾಗಬೇಕಾದರೆ ಯೋಜನೆಗಳನ್ನು ಕಾರ್ಯಗತಗೊಳಿಸುವ ಪದ್ಧತಿ ವಿಕೇಂದ್ರಿಕರಣಗೊಳ್ಳಬೇಕು. ಜಿಲ್ಲೆಯನ್ನು ಆಡಳಿತಾತ್ಮಕವಾದ ಒಂದು ಘಟಕವೆಂದು ಒಪ್ಪಿಕೊಂಡಿರುವುದರಿಂದ ಪ್ರಥಮವಾಗಿ ವಿಕೇಂದ್ರೀಕರಣ ರಾಜ್ಯ ಮಟ್ಟದಿಂದ ಜಿಲ್ಲಾ ಮಟ್ಟಕ್ಕೊಯ್ಯುವುದು ಅಗತ್ಯ. ಅಂತಿಮವಾಗಿ ಬಡತನ ವಿರೋಧಿ ಕಾರ್ಯ ಕ್ರಮಗಳನ್ನು ಪರಿಣಾಮಕಾರಿಯಾಗಿ ಜ್ಯಾರಿಯಲ್ಲಿ ತರಬೇಕಾದರೆ ಅವು ಮಂಡಲ ಮಟ್ಟವನ್ನು ತಲ್ಪಲೇ ಬೇಕು" ಎಂದು ಯೋಜನಾ ಆಯೋಗದ ಕುರಿತು ಬರೆದ ದಸ್ತಾವೇಜು ಸ್ಪಷ್ಟ ಪಡಿಸುತ್ತದೆ.

ನೌಕರಶಾಹಿ ಪದ್ಧತಿಯಲ್ಲಿ, ಕೇಂದ್ರೀಕೃತವಾಗಿಯೇ ಯೋಜನೆಗಳನ್ನು ರೂಪಿಸಬಾರದೆಂದೂ ಪ್ರಜಾಪ್ರಭುತ್ವ ರೀತಿಯಲ್ಲಿ ವಿಕೇಂದ್ರಿಕರಣವಾಗಿಯೇ ಅದು ನಡೆಯಬೇಕೆಂಬ ಆಶಯವನ್ನು ಯೋಜನಾ ಆಯೋಗ ಹೊಂದಿದೆ. ಆದರೆ ಆ ವರದಿಯಲ್ಲಿ ನಮೂದಿಸಿರುವುದು ಬರೇ ಸಿದ್ಧಾಂತ ಮಾತ್ರ. ಕಾರ್ಯ ಚರಣೆಯಲ್ಲಿ ತದ್ವಿರುದ್ಧವಾಗಿ ನಡೆದಿದೆ. ಜುಲೈ 12 ರ ಮಂಡಲದ ಸಭೆಗೆ ತಯಾರಿಸಿದ ವರದಿಯಲ್ಲಿ ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಜ್ಯೋತಿ ಬಸು ಅವರು ಈ ವಿಷಯ ಎತ್ತಿ ತೋರಿಸಿದ್ದಾರೆ.

ಮಂಡಲದ ಅಪಮೌಲ್ಯ

ಯೋಜನೆಗಳ ರೂಪರೇಷೆಗಳ ತಯಾರಿಕೆಯಲ್ಲಿ ರಾಜ್ಯಗಳ ಮುಖ್ಯ ಮಂತ್ರಿಗಳ ಪಾತ್ರ ಪ್ರಾಧಾನ್ಯವಾಗಿದ್ದರೂ, ರಾಷ್ಟ್ರೀಯ ಅಭಿವೃದ್ಧಿ ಮಂಡಲ ಮತ್ತು ಕೇಂದ್ರ ಸರ್ಕಾರಗಳೇ ಆ ಪಾತ್ರವನ್ನು ತಮ್ಮದೇ ಗುತ್ತಿಗೆಯಾಗಿ ಪರಿವರ್ತಿಸಿಕೊಂಡಿವೆ. ರಾಜ್ಯದ ಯೋಜನೆಯ ಗಾತ್ರದ ಕುರಿತು ಪಶ್ಚಿಮ ಬಂಗಾಲದ ಸರ್ಕಾರ ಹಾಗೂ ಯೋಜನಾ ಆಯೋಗದ ಮಧ್ಯೆ ಭಿನ್ನಾಭಿಪ್ರಾಯ ಉಂಟಾದಾಗ ಇದರ ಕುರಿತು ಚರ್ಚಿಸಲು ಮಂಡಲದ ಸಭೆ ಸೇರಬೇಕೆಂದು ರಾಜ್ಯ ಸರ್ಕಾರ ಕೇಳಿಕೊಂಡಾಗ ಅದನ್ನು ಕೇಂದ್ರ ಸರಕಾರ ನಿರಾಕರಿಸಿತು. ಇದರ ಕುರಿತು ತಮಗೆ ಏನು ಮಾಡಲಿಕ್ಕೂ ಸಾಧ್ಯವಿಲ್ಲೆಂದು ಯೋಜನಾ ಆಯೋಗದ ಉಪಾಧ್ಯಕ್ಷ ಮತ್ತು ಯೋಜನಾಮಂತ್ರಿಯವರು ತಿಳಿಸಿದರು.

ಅಕ್ಟೋಬರ್ 1983 ರಲ್ಲಿ ನಗರದಲ್ಲಿ ಹದಿನೇಳು ವಿರೋಧ ಪಕ್ಷಗಳ ಸಮಾವೇಶ ಸೇರಿ ಕೇಂದ್ರ—ರಾಜ್ಯಗಳ ಸಂಬಂಧದ ಕುರಿತು ಚರ್ಚೆಮಾಡಿದಾಗ, ದೇಶದ ಆರ್ಥಿಕತೆಯ ಕುರಿತು ಹೊಂದಾಣಿಕೆ ತರುವ, ಯೋಜನೆ ತಯಾರಿಸುವ ಜವಾಬ್ದಾರಿ ಕೇಂದ್ರವೇ ವಹಿಸಬೇಕೆಂದು ಸೂಚಿಸಿದಾಗ, ಅಂಥ ಜವಾಬ್ದಾರಿಯನ್ನು ಕೇಂದ್ರ ಸರ್ಕಾರಕ್ಕಲ್ಲ ಎಲ್ಲ ಮುಖ್ಯಮಂತ್ರಿಗಳನ್ನೊಳಗೊಂಡಿರುವ ರಾಷ್ಟ್ರೀಯ ಅಭಿವೃದ್ಧಿ ಮಂಡಲಕ್ಕೊಪ್ಪಿಸಬೇಕೆಂದು ಸೂಚಿಸಲಾಗಿತ್ತು. ಈಗ ಯೋಜನಾ ಆಯೋಗ ಕೇಂದ್ರ ಸರ್ಕಾರದ ಒಂದು ಅಂಗವಾಗಿದೆ. ಆ ರೀತಿಯಾಗದೆ ಅದು ಮಂಡಲದ ಸೃಷ್ಟಿಯಾಗಿ, ಅದಕ್ಕೇ ಜವಾಬ್ದಾರಿಯಾಗಿರುವಂತೆ ಯೋಜನಾ ಆಯೋಗ ಇರಬೇಕಾದ್ದು ಅಗತ್ಯವೆಂದೂ ಅದೇ ಸಮಾವೇಶ ಒತ್ತಿ ಹೇಳಿತು.

ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯವರು ಹೇಳಿದಂತೆ ಮಂಡಲದ ಸಭೆಯಲ್ಲಿ ಯಾವ ವಿಷಯಗಳನ್ನು ಚರ್ಚಿಸಬೇಕೆಂಬುದನ್ನು ಮಂಡಲವೇ ನಿರ್ಧರಿಸಬೇಕಲ್ಲದೆ ಯೋಜನಾ ಆಯೋಗವಲ್ಲ. ನಮ್ಮ ಸಂವಿಧಾನದ 263ನೇ ಕಲಂನಲ್ಲಿ ನಮೂದಿಸಿದಂತೆ ರಾಷ್ಟ್ರೀಯ ಅಭಿವೃದ್ಧಿ ಮಂಡಲವು ಅಂತರಾಜ್ಯ ಮಂಡಲಕ್ಕೆ ಸಾಮೀಪ್ಯವಾಗಿದೆ; ಈಗಿರುವ ಪರಿಸ್ಥಿತಿಯಲ್ಲಿ ಕೇಂದ್ರ ರಾಜ್ಯಗಳಿಗೆ ಸಂಬಂಧಪಟ್ಟ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಲು ಉತ್ತಮ ಸಾಧನವಾಗಿದೆ.

ನ್ಯಾಯಯುತವಾಗಿ ಚುನಾಯಿಸಲ್ಪಟ್ಟ ಸಿಕ್ಕಿಂ ಮತ್ತು ಕಾಶ್ಮೀರ ಸರ್ಕಾರಗಳನ್ನು ವಿಸರ್ಜನೆ ಮಾಡಿರುವುದನ್ನು ನೋಡಿದಾಗ ಕೇಂದ್ರದ ಸರ್ವಾಧಿಕಾರಿ ಧೋರಣೆಗೆ ಬೇರೆ ಉದಾಹರಣೆ ಅಗತ್ಯವಿಲ್ಲೆಂದು ಪಶ್ಚಿಮ ಬಂಗಾಲ ಸರ್ಕಾರದ ಪ್ರಕಟಣೆ ಹೇಳಿದೆ. ಬಹು ಸಂಖ್ಯ ಜನಾಭಿಪ್ರಾಯ ಮತ್ತು ಹಲವಾರು ರಾಜ್ಯಗಳ ಒತ್ತಾಯಕ್ಕೆ ಮಣಿದು ಕೇಂದ್ರ-ರಾಜ್ಯ ಸಂಬಂಧದ ಕುರಿತು ಹಾಗೆಯೇ ರಾಜ್ಯಪಾಲರ ಮತ್ತು ಸಂವಿಧಾನದ 356—357 ಕಲಂಗಳ ದುರುಪಯೋಗ ಮಾಡಿಕೊಳ್ಳುವ ಕುರಿತು ವರದಿ ಸಲ್ಲಿಸಲು ಸರ್ಕಾರಿಯ ಕಮಿಟಿ ನೇಮಿಸಿರುವುದರ ಕುರಿತು ಪಶ್ಚಿಮ ಬಂಗಾಲ ಸರ್ಕಾರದ ಪ್ರಕಟಣೆ ಕೇಂದ್ರ ಸರ್ಕಾರದ ಗಮನ ಸೆಳೆದಿದೆ. ರಾಜ್ಯದ ರಾಜ್ಯಪಾಲರ ಸಹಾಯದಿಂದ ಕೇಂದ್ರ ಸರ್ಕಾರ ಕೈಗೊಂಡ ನಿರ್ಣಯಗಳು ಈ ಕಲಂಗಳ ವಿರುದ್ಧವಾಗಿರುವುದಷ್ಟೇ ಅಲ್ಲ, ರಾಷ್ಟ್ರದ ಸಮಗ್ರತೆ ಮತ್ತು ಐಕ್ಯತೆಗೆ ಬಲವಾದ ಅಪಾಯವನ್ನು ತಂದೊಡ್ಡಿದೆ. ಕೇಂದ್ರ ಸರ್ಕಾರದ ಕೃತಿಗಳು ರಾಷ್ಟ್ರೀಯ ಅಭಿವೃದ್ಧಿ ಮಂಡಲದ ಮೌಲ್ಯವನ್ನು ಕಡಿಮೆ ಮಾಡಿರುವುದಷ್ಟೇ ಅಲ್ಲ, ದೇಶದ ಆರ್ಥಿಕ ಯೋಜನೆಯನ್ನು ನಿರ್ಧರಿಸುವುದಕ್ಕೂ ಅಡೆತಡೆಗಳನ್ನೊಡ್ಡಿದೆ. ತನ್ನ ಆಳ್ವಿಕೆಯ ಕೊನೆಯ ಹಂತದಲ್ಲಿರುವ ಕೇಂದ್ರ ಸರ್ಕಾರ 1985 90ರ ಕಾಲಾವಧಿಯ ಯೋಜನೆಯ ರೂಪರೇಷೆಗಳನ್ನು ನಿರ್ಧರಿಸುವ ಸಲುವಾಗಿ ಯಾವ ಅಧಿಕಾರವನ್ನೂ ಪಡೆದಿಲ್ಲ.

ಯೋಜನೆಯ ಕರಡಿನಲ್ಲಿ ಸ್ಫೂರ್ತಿದಾಯಕ ಅಂಶಗಳಾವುವೂ ಇಲ್ಲ. ಆರನೇ ಯೋಜನೆಯಲ್ಲಿ ಸಾಧಿಸಿದ್ದೇವೆಂದು ಹೇಳುವ ಅಂಶಗಳೆಲ್ಲ ಪ್ರಕೃತಿಯ ಕೊಡು'ಗಳಿಂದ ಮಾತ್ರ ಸಾಧ್ಯವಾಗಿವೆ. ಆಹಾರ ಧಾನ್ಯದಲ್ಲಿ ಹೆಚ್ಚು ಉತ್ಪಾದನೆಯಾದರೂ ಬೆಲೆ ಹಿಡಿತ ವಿಫಲಗೊಂಡು ಬೆಲೆ ಹೆಚ್ಚಳ ಅಪಾಯಕಾರಿ ಮಟ್ಟ ತಲ್ಪುತ್ತಿದೆ. ಕೈಗಾರಿಕಾ ರಂಗದಲ್ಲಿಯ ಬೆಳವಣಿಗೆ ನಿರಾಶಾದಾಯಕವಾಗಿದೆ. ಕೈಗಾರಿಕೆಗಳ ಉತ್ಪಾದನಾ ಶಕ್ತಿಯ ಮಟ್ಟವನ್ನು ತಲುಪುವ ಸಲುವಾಗಿ ಪ್ರಯತ್ನ ನಡೆದಿಲ್ಲ. ನಿರುದ್ಯೋಗಿಗಳ ಸಂಖ್ಯೆ ಗಗನ ಚುಂಬಿಸುತ್ತಿದೆ. ಎಣ್ಣೆ ಉತ್ಪಾದನೆ ಒಂದನ್ನು ಬಿಟ್ಟು ಇತರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಉತ್ಪಾದನೆ ಕುಂಠಿತಗೊಂಡಿರುವುದಷ್ಟೇ ಅಲ್ಲ ಅವು ಅಪಾರ ನಷ್ಟವನ್ನನುಭವಿಸುತ್ತಿವೆ. ಯೋಜನಾ ಆಯೋಗ ಸುಂದರ ಚಿತ್ರ ಪ್ರದರ್ಶಿಸಲು ಪ್ರಯತ್ನ ಮಾಡಿದರೂ ಕೂಡ ಬಡತನದ ರೇಖೆ ಕೆಳಮಟ್ಟದಲ್ಲೇ ಇರುವುದು ಸ್ಪಷ್ಟವಾಗಿದೆ. ಆ ಕಾರಣದಿಂದಾಗಿ ಸಮಾಜದಲ್ಲಿ ಅಸಂತೋಷ ತುಂಬಿ ತುಳುಕಾಡುತಿದೆ; ಬಹಿರಂಗಗೊಳ್ಳುತ್ತಿದೆ. ಕರಾಕರಣೀಯ ಪದ್ಧತಿಯಿಂದಾಗಿ ಕಳ್ಳಸಂತೆ ಖೋರರು ಲಾಭ ಪಡೆಯುತ್ತಿದ್ದಾರೆ. ಬಡವರೂ ಮಧ್ಯಮ ವರ್ಗದವರೂ ಬೆನ್ನು ಮೂಳೆ ಮುರಿಸಿಕೊಂಡು ಕರ ಕೊಡಬೇಕಾಗಿದೆ.

ತೀವ್ರ ಚರ್ಚೆ ಅಗತ್ಯ

ಕಾಂಗ್ರೆಸ್ಸೇತರ ಸರ್ಕಾರಗಳು ಕಾಲಕಾಲಕ್ಕೆ ಸಲ್ಲಿಸುತ್ತ ಬಂದ ಸೂಚನೆಗಳನ್ನು ಚರ್ಚಿಸಲು ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಲ ತಯಾರಾಗ ಬೇಕಾಗಿರುವುದು ಅತ್ಯಗತ್ಯ. ಅವರ ಸೂಚನೆಗಳನ್ನು ಸಾರ್ವಜನಿಕರ ಅಭಿಪ್ರಾಯ ಪಡೆಯಲು ವಿಸ್ತೃತ ಪ್ರಚಾರಗೊಳಿಸುವುದು ಅತ್ಯಗತ್ಯ. ಜನಾಭಿಪ್ರಾಯ ಪಡೆಯದೆ, ಬರೇ ನೌಕರ ಶಾಹಿಗಳನ್ನೇ ಅವಲಂಬಿಸಿದರೆ ಯಾವ ಯೋಜನೆಯೂ ಪರಿಣಾಮ ಕಾರಿಯಾಗಿ ಕಾರ್ಯಗತವಾಗಲು ಸಾಧ್ಯವಿಲ್ಲ. ಏಳನೇ ಯೋಜನೆಯ ಕುರಿತು ಕೇಂದ್ರ ಸರ್ಕಾರದ ನೀತಿ ನಿರೂಪಣೆ ಕುರಿತು ಜನರಲ್ಲಿ ಪ್ರಚಾರಮಾಡಿ ಅದರಲ್ಲಿ ಮೂಲಭೂತ ಬದಲಾವಣೆಗಳನ್ನುಂಟು ಮಾಡುವಂತೆ ಜನರ ಅಭಿಪ್ರಾಯ ರೂಪುಗೊಳ್ಳುವಂತೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಸರ್ವ ವಿಧದ ಪ್ರಯತ್ನ ಮಾಡಲೇಬೇಕು.

(ಪಶ್ಚಿಮ ಬಂಗಾಲದ ಸರಕಾರ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಸಲ್ಲಿಸಿದ ಸೂಚನೆಗಳ ಮತ್ತು ಸಿ. ಪಿ. ಐ. (ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದರಿಪಾದ್ ಅವರು ಬರೆದ ಲೇಖನದ ಮುಖ್ಯಾಂಶಗಳನ್ನು ಪ್ರಕಟಿಸುತ್ತಿದ್ದೇವೆ.)

ಮಂಗಳೂರು ತಾಲೂಕು ರೈತ ಸಂಘದ ಸಭೆ

ತಾ 23-8-84 ರಂದು ಕುಪ್ಪೆಪದವಿನಲ್ಲಿ ರಘುನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ರೈತರ ಸಭೆ ಜರುಗಿತು. ತಾಲೂಕು ರೈತ ಸಂಘದ ಉಪಾಧ್ಯಕ್ಷರಾದ ಜೆ. ಕೃಷ್ಣಪ್ಪನವರು ಸಂಘಟನೆಯ ಅವಶ್ಯಕತೆಯನ್ನು ವಿವರಿಸಿದ ಬಳಿಕ ತಾಲೂಕು ರೈತ ಸಂಘದ ಉಪಾಧ್ಯಕ್ಷ ಎಂ. ಎಸ್. ನಾರಾಯಣ ಮತ್ತು ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ರವರು ರೈತರ ಮುಂದಿರುವ ಸಮಸ್ಯೆಗಳನ್ನು ಹಾಗೂ ದ. ಕ. ಜಿಲ್ಲಾ ರೈತ ಸಂಘದ ತೀರ್ಮಾನದಂತೆ ಗ್ರಾಮ ಸಮಿತಿಗಳನ್ನು ರಚಿಸಿ ರೈತರ ಸಂಘಟನೆಯನ್ನು ಬಲಗೊಳಿಸುವ ಅವಶ್ಯಕತೆಯನ್ನು ವಿವರಿಸಿ ಮಾತನಾಡಿದರು. ಬಳಿಕ ಮುಂದಿನ ಚಟುವಟಿಕೆ ನಡೆಸಲು ಕೆಲಿಂಜಾರು, ಕೊಳವೂರು, ಮತ್ತು ಮುತ್ತೂರು ಈ ಮೂರು ಗ್ರಾಮಗಳಿಗೆ ಒಂದು ಹೊಸ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ರಘುನಾಥ ಶೆಟ್ಟಿ, ಉಪಾಧ್ಯಕ್ಷರಾಗಿ ದೂಮಣ್ಣ ಪೂಜಾರಿ ಕಾರ್ಯದರ್ಶಿಯಾಗಿ ನೀಲಯ್ಯನಾಯ್ಕ ಮತ್ತು ಜೊತೆ ಕಾರ್ಯದರ್ಶಿಯಾಗಿ ಶ್ರೀಧರ ರೈ ಇವರನ್ನು ಆಯ್ಕೆ ಮಾಡಲಾಯಿತು. ಬಳಿಕ ಶ್ರೀಧರ ರೈಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ರಾಷ್ಟ್ರೀಯತೆಯ ಪ್ರಶ್ನೆ | 2

— ಬಿ. ಟಿ. ರಣದಿವೆ

ಸಮಾನತೆಯೊಂದಿಗೆ ಐಕ್ಯತೆಯ ಹೋರಾಟ - ಭಾರತೀಯ ಕಾರ್ಮಿಕ ವರ್ಗದ ಪಾತ್ರ

(ದೇಶದ ಪ್ರಸ್ತುತ ಸನ್ನಿವೇಶದಲ್ಲಿ ಬಹಳ ಮಹತ್ವ ಪಡೆದಿರುವ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಸಮಸ್ಯೆಯ ಮಾರ್ಕ್ಸ್‌ವಾದೀ—ಲೆನಿನ್‌ವಾದೀ ವಿಶ್ಲೇಷಣೆ ನಡೆಸುವ ಕಾಂ. ಬಿ. ಟಿ. ರಣದಿವೆಯವರ ಲೇಖನ "Marism and the Nationality Question in India" ದ ಕನ್ನಡ ಅನುವಾದದ ಮೊದಲ ಕಂತನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಅದರಲ್ಲಿ ಈ ಸಮಸ್ಯೆಯ ಬಗ್ಗೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಸ್ಟಾಲಿನ್‌ರ ವಿಶ್ಲೇಷಣೆಗಳ ಸಂಕ್ಷಿಪ್ತ ವಿವರಣೆ ಕೊಟ್ಟು ಮಾರ್ಕ್ಸ್‌ವಾದಿ ಲೆನಿನ್‌ವಾದಿಗಳ ದೃಷ್ಟಿಯಲ್ಲಿ ಸಮಸ್ಯೆಯ ಎರಡು ಅಂಶಗಳನ್ನು ಒತ್ತಿ ಹೇಳಲಾಗಿತ್ತು—ಒಂದು, ವಿಮೋಚನಾ ಹೋರಾಟಗಳನ್ನು ಅವು ಜಗತ್ತಿನ ಸಾಮಾಜಿಕ ಬೆಳವಣಿಗೆಯಲ್ಲಿ ವಹಿಸುವ ಪಾತ್ರದ ಆಧಾರದ ಮೇಲೆ, ಎರಡು ರಾಷ್ಟ್ರೀಯತಾ ಸಮಸ್ಯೆ ಪರಿಹಾರವಾಗಬೇಕಾದರೆ ಪ್ರಮುಖ ಬಂಡವಾಳ ಶಾಹೀ ದೇಶಗಳ ಮತ್ತು ದಮನಕ್ಕೊಳಗಾದ ದೇಶಗಳ ಕಾರ್ಮಿಕ ವರ್ಗದ ಐಕ್ಯತೆ ಅತಿ ಅಗತ್ಯ. ಎಂಬುದನ್ನು

ಇಲ್ಲಿ ಪ್ರಕಟವಾಗುತ್ತಿರುವ ಎರಡನೇ ಕಂತಿನಲ್ಲಿ ನವ ವಿಮೋಚಿತ ದೇಶವಾದ ಭಾರತದಲ್ಲಿ ರಾಷ್ಟ್ರೀಯತಾ ಸಮಸ್ಯೆಯ ಸ್ವರೂಪ ಇದನ್ನು ಎದುರಿಸುವಲ್ಲಿ ಇತರ ವರ್ಗಗಳ ದೌರ್ಬಲ್ಯ ಹಾಗೂ ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರದ ವಿಶ್ಲೇಷಣೆಯಿದೆ.

ಬಂಡವಾಳ ಶಾಹೀ - ಪೂರ್ವ ಪೂರ್ವಾರ್ಜಿತವನ್ನು ಇನ್ನೂ ಮುಗಿಸಿಬಿಡದ ಮತ್ತು ಪ್ರಜಾಪ್ರಭುತ್ವ ಕ್ರಾಂತಿಯನ್ನು ಇನ್ನೂ ಪೂರ್ಣಗೊಳಿಸದಿರುವ ಒಂದು ನವ ವಿಮೋಚಿತ ತೃತೀಯ ಜಗತ್ತಿನ ದೇಶದ ರಾಷ್ಟ್ರೀಯತಾ ಸಮಸ್ಯೆಯನ್ನು ನಾವು ಪರಿಶೀಲಿಸುತ್ತಿದ್ದೇವೆ.

ಈ ರಾಷ್ಟ್ರೀಯತಾ ಸಮಸ್ಯೆಯನ್ನು ಸದ್ಯದ ಘಟ್ಟದಲ್ಲಿ ಸಾಮ್ರಾಜ್ಯ ಶಾಹೀ-ವಿರೋಧೀ, ಊಳಿಗಮಾನ್ಯ ವಿರೋಧೀ ಮತ್ತು ಬೂರ್ಜ್ವಾವಿರೋಧೀ ಸತ್ವ ಹೊಂದಿರುವ ಜನತಾ ಪ್ರಜಾಪ್ರಭುತ್ವವಾದೀ ಹೋರಾಟದಿಂದ ಪ್ರತ್ಯೇಕಿಸಿ ಪ್ರಸ್ತುತಪಡಿಸುವುದು ಏಕ್‌ದಂ ಪ್ರತಿಕ್ರಿಯಾವಾದೀ ಕೆಲಸವಾಗುತ್ತದೆ. ಭಾರತೀಯ ಜನತೆ ಮತ್ತು ಶ್ರಮಜೀವಿಗಳ ಐಕ್ಯತೆಯಿಂದ ಬೇರ್ಪಡಿಸಿ ಈ ರಾಷ್ಟ್ರ ಸಮಸ್ಯೆಯನ್ನು ಮಂಡಿಸುವುದೆಂದರೆ ಅದು ಆಳುವ ವರ್ಗಗಳಿಗೆ ಸಹಾಯ ಮಾಡಿದಂತೆಯೇ. ಅದು ಪ್ರಾಂತೀಯತೆಪ್ರತ್ಯೇಕತವಾದ, ವಿಯೋಜನಾವಾದ (secessionism)ಕ್ಕೆ ಎಡೆಮಾಡಿಕೊಡುತ್ತದೆ.

ಕಾರ್ಮಿಕ ವರ್ಗದ ದೃಷ್ಟಿಕೋನ

ಭಾರತದ ಕಾರ್ಮಿಕ ವರ್ಗ ಮತ್ತು ಜನತೆ ಒಂದು ದೊಡ್ಡ ದೇಶವನ್ನು ತನ್ನ ಪೂರ್ವಜರಿಂದ ಪಡೆದಿವೆ. ಕ್ರಾಂತಿ ಮುನ್ನಡೆ ಸಾಧಿಸಬೇಕಾದರೆ ಸಮಾಜವಾದದತ್ತ ಸಾಗಬೇಕಾದರೆ ಈ ದೇಶದ ಐಕ್ಯತೆಯನ್ನು ಕಾಪಾಡಿ ಬಲಗೊಳಿಸುವುದು ಅತ್ಯಗತ್ಯ. ಕಾರ್ಮಿಕ ವರ್ಗದ ಪಕ್ಷ ಎಷ್ಟು ಸಾಧ್ಯವೋ ಅಷ್ಟು ದೊಡ್ಡ ಪ್ರಭುತ್ವವನ್ನು ಸೃಷ್ಟಿಸಲು ಹೆಣಗುತ್ತದೆ, ರಾಷ್ಟ್ರಗಳನ್ನು ಪರಸ್ಪರ ಸಮೀಪ ತಂದು ಅವುಗಳು ಪರಸ್ಪರ ಮತ್ತಷ್ಟು ಬೆಸೆದುಕೊಳ್ಳುವಂತೆ ಅದು ಹೆಣಗುತ್ತದೆ ಎಂಬ ಲೆನಿನ್‌ರ ಮಾತನ್ನು ಈ ಹಿಂದೆ ಹೇಳಿದ್ದೇವೆ. ನಾವು ಈಗಾಗಲೇ ಒಂದು ದೊಡ್ಡ ಪ್ರಭುತ್ವ ಪಡೆದಿದ್ದೇವೆ. ರಾಷ್ಟ್ರೀಯ ಅಸಮಾನತೆಯ ವಿರುದ್ಧ ಹೋರಾಡುವ ನಮ್ಮ ವಿಧಾನ ಮತ್ತು ಉದ್ದೇಶ ಹೆಚ್ಚೆಚ್ಚು ಸಮಾನತೆಯ ಭಾವದೊಂದಿಗೆ ಭಾರತದ ರಾಷ್ಟ್ರೀಯ ಗುಂಪುಗಳನ್ನು ಪರಸ್ಪರ ಹೆಚ್ಚೆಚ್ಚು ಬೆಸೆಯುವುದೇ ಆಗಿದೆ.

ರಾಷ್ಟ್ರೀಯ ಅಸಮಾನತೆಗಳು ಅಸ್ತಿತ್ವದಲ್ಲಿರುವಲ್ಲೆಲ್ಲಾ ವಿಯೋಜನಾವಾದ ಮತ್ತು ಪ್ರತ್ಯೇಕತಾವಾದಕ್ಕೆ ಪ್ರೋತ್ಸಾಹ ನೀಡುವುದು ಇಂದು ಸಾಮ್ರಾಜ್ಯಶಾಹಿಗಳ ಕಾರ್ಯವ್ಯೂಹ ಮತ್ತು ತಂತ್ರವಾಗಿದೆ. ಸಾಮ್ರಾಜ್ಯ ಶಾಹಿಯನ್ನು ಹೊರಗೆಸೆದ ನಂತರ ಸ್ಥಾಪನೆಗೊಂಡ ಪ್ರಭುತ್ವಗಳು ಒಡೆಯುವುದು ಸಾಮ್ರಾಜ್ಯ ಶಾಹಿಯ ಹಿತಾಸಕ್ತಿಗೆ ಅನುಕೂಲಕರ. ಯಾಕೆಂದರೆ ಈ ರೀತಿ ಒಡೆದು ಪ್ರತ್ಯೇಕ ಅಸ್ತಿತ್ವ ಪಡೆದ ಭಾಗಗಳನ್ನು ಸುಲಭವಾಗಿ ಗುಲಾಮಗಿರಿಗೊಳಪಡಿಸಿಕೊಳ್ಳಲು ಅದಕ್ಕೆ ಸಾಧ್ಯವಾಗುತ್ತದೆ. ನಮ್ಮ ದೇಶದ ಬೂರ್ಜ್ವಾ-ಭೂಮಾಲೀಕ ಸರಕಾರ ರಾಷ್ಟ್ರೀಯ ಗುಂಪುಗಳಿಗೆ ಸಂಬಂಧಪಟ್ಟಂತೆ ಅನುಸರಿಸಿದ ಧೋರಣೆಯಿಂದಾಗಿ ಈ ಸಾಮ್ರಾಜ್ಯ ಶಾಹಿಯ ಬಲೆಗೆ ಬಿದ್ದಂತಾಗುತ್ತದೆ. ಈ ಧೋರಣೆಯ ವಿರುದ್ಧ ಹೋರಾಟವನ್ನು ಸಾಮ್ರಾಜ್ಯ ಶಾಹಿಗಳಿಗೆ ನೆರವಾಗುವ ರೀತಿಯಲ್ಲಿ ನಡೆಸುವುದು ಸಾಧ್ಯವಿಲ್ಲ.

ಉಭಯ ಸ್ವರೂಪದ ಪಾತ್ರ

ಬೂರ್ಜ್ವಾ-ಭೂಮಾಲೀಕ ಧೋರಣೆಗಳನ್ನು, ಸಾಮ್ರಾಜ್ಯ ಶಾಹಿಗಳ ಆಟವನ್ನು ವಿಫಲಗೊಳಿಸುವಲ್ಲಿ ಮತ್ತು ದೇಶವನ್ನು ಒಗ್ಗಟ್ಟಿನಲ್ಲಿ ಇಡುವಲ್ಲಿ ಈ ನಮ್ಮ ದೇಶದ ಕಾರ್ಮಿಕ ವರ್ಗ ಒಂದು ಪ್ರಮುಖ ಪಾತ್ರ ವಹಿಸಬೇಕಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಬೇಕಾದ ಅಖಿಲ-ಭಾರತ ದೃಷ್ಟಿಕೋನ ಮತ್ತು ವರ್ಗ ದೃಷ್ಟಿಕೋನ ಪಡೆಯುವಲ್ಲಿ ಉಳಿದೆಲ್ಲಾ ವರ್ಗಗಳಿಗಿಂತಲೂ ಉತ್ತಮ ಸನ್ನಿವೇಶ ಕಾರ್ಮಿಕ ವರ್ಗಕ್ಕಿದೆ. ಯಾದ್ದರಿಂದಲೇ ಈ ರೀತಿ ಪ್ರಮುಖ ಪಾತ್ರವನ್ನು ಅದು ವಹಿಸಬೇಕಾಗಿದೆ. ಯಾವುದೇ ರಾಷ್ಟ್ರೀಯ ಗುಂಪಿನ ವಿಶೇಷಾಧಿಕಾರಗಳ ವಿರುದ್ಧ, ಯಾವುದೇ ರಾಷ್ಟ್ರೀಯ ಗುಂಪನ್ನು ಅಸಮಾನವಾಗಿ ನಡೆಸಿಕೊಳ್ಳುವುದರ ವಿರುದ್ಧ, ಹೋರಾಡಬೇಕು ಎಂದು ಕಾರ್ಮಿಕ ವರ್ಗದ ಪಕ್ಷಕ್ಕೆ ಹೇಳುತ್ತಾ ಲೆನಿನ್ ಮುಂದುವರಿದು ಈ ಮಾತುಗಳನ್ನು ಸೇರಿಸಿದ್ದಾರೆ— 'ಕಾರ್ಮಿಕ ವರ್ಗದ ಪ್ರಜಾಪ್ರಭುತ್ವ ಭಾಷೆ ಇತ್ಯಾದಿ ಪ್ರಶ್ನೆಗಳ ಮೇಲೆ ವಿವಿಧ ಬೂರ್ಜ್ವಾ ಪಕ್ಷಗಳ ಕಿತ್ತಾಟಕ್ಕೆ ಪ್ರತಿಯಾಗಿ ಎಲ್ಲಾ ರಾಷ್ಟ್ರೀಯ ಗುಂಪುಗಳ ಕಾರ್ಮಿಕರು ಎಲ್ಲಾ ಕಾರ್ಮಿಕ ವರ್ಗದ ಸಂಘಟನೆಗಳಲ್ಲಿ—ಕಾರ್ಮಿಕ ಸಂಘ, ಸಹಕಾರೀ ಸಂಘ, ಬಳಕೆದಾರರ, ಶೈಕ್ಷಣಿಕ ಮತ್ತಿತರ ಎಲ್ಲಾ ಸಂಘಟನೆಗಳಲ್ಲಿ — ಯಾವುದೇ ರೀತಿಯ ಬೂರ್ಜ್ವಾ ರಾಷ್ಟ್ರವಾದಕ್ಕೆ ಭಿನ್ನವಾದ ರೀತಿಯಲ್ಲಿ ಬೇಷರತ್ತಾಗಿ ಹಾಗೂ ಸಂಪೂರ್ಣವಾಗಿ ಬೆರೆತು ಹೋಗಬೇಕೆಂದು ಒತ್ತಾಯ ಮಾಡುತ್ತದೆ. ಈ ಮಾದರಿಯ ಐಕ್ಯತೆ ಮತ್ತು ಏಕರೂಪ ಸಂಯೋಜನೆ ಮಾತ್ರ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯಲು ಬಂಡವಾಳಕ್ಕೆ ವಿರುದ್ಧವಾಗಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಸಾಧ್ಯವಾಗುತ್ತದೆ. ಬಂಡವಾಳ ಈಗಾಗಲೇ ಅಂತರಾಷ್ಟ್ರೀಯ ಸ್ವರೂಪ ಪಡೆದಿದೆ ಹಾಗೂ ಈ ಸ್ವರೂಪ ಇನ್ನಷ್ಟು ತೀವ್ರಗೊಳ್ಳುತ್ತದೆ. ಅಲ್ಲದೆ ಈ ಐಕ್ಯತೆ ಮತ್ತು ಸಂಯೋಜನೆ ಮಾತ್ರ ಮಾನವ ಕುಲವನ್ನು ಯಾವುದೇ ವಿಶೇಷಾಧಿಕಾರಗಳಿಲ್ಲದ, ಶೋಷಣೆಯಿಲ್ಲದ ಹೊಸ ಜೀವನ ವಿಧಾನದತ್ತ ಬೆಳವಣಿಗೆ ಹೊಂದಲು ಉತ್ತೇಜನ ನೀಡಬಲ್ಲದು." (Collected Works, ಸಂಪುಟ 20, ಪುಟ 22)

ಕಾರ್ಮಿಕ ವರ್ಗ ತನ್ನ ಐಕ್ಯತೆಯನ್ನು ಕಾಯ್ದುಕೊಳ್ಳಲೇಬೇಕು, ತನ್ನ ವರ್ಗ ಸಂಘಟನೆಗೆ ಸೇರಿ ಒಗ್ಗಟ್ಟಾಗಿರಬೇಕು ಹಾಗೂ ರಾಷ್ಟ್ರೀಯ ಅಂಶಗಳ ಬಗ್ಗೆ ತನ್ನಲ್ಲಿ ಒಡಕು ಉಂಟಾಗದಂತೆ ನೋಡಿಕೊಳ್ಳಬೇಕು. ಆಗ ಮಾತ್ರ ತನ್ನ ದ್ವಿಪಾತ್ರವನ್ನು ಅಥವಾ ರಾಷ್ಟ್ರೀಯ ಅಸಮಾನತೆಯ ವಿರುದ್ಧ ಹೋರಾಡುವ ಮತ್ತು ರಾಷ್ಟ್ರೀಯ ಗುಂಪುಗಳು ಇನ್ನಷ್ಟು ನಿಕಟವಾಗಿ ಬೆಸೆದುಕೊಳ್ಳುವಂತೆ ಮಾಡುವ ತನ್ನ ಉಭಯ ಸ್ವರೂಪದ ಪಾತ್ರವನ್ನು ನಿರ್ವಹಿಸಲು ಅದು ಶಕ್ತವಾಗುತ್ತದೆ.

ಕಾರ್ಮಿಕ ವರ್ಗದ ಸರ್ವಸಾಮಾನ್ಯ ಅಖಿಲ ಭಾರತ ವರ್ಗ—ಸಂಘಟನೆಗಳ ಮಹತ್ವ ಇದು. ಅವರಿಗೆ ಅಖಿಲ ಭಾರತ ದೃಷ್ಟಿಕೋನ, ವರ್ಗ ಐಕ್ಯತೆಯೊಂದಿಗೆ ರಾಷ್ಟ್ರೀಯ ಸಮಾನತೆಯನ್ನು ಮಿಳಿತಗೊಳಿಸುವ ದೃಷ್ಟಿಕೋಣ ಇದೆ. ಏಕೀಕರಣಗೊಳಿಸುವ ತನ್ನ ಪಾತ್ರವನ್ನು ಕಾರ್ಮಿಕ ವರ್ಗ ವಹಿಸದೇ ಇದ್ದರೆ ಭಾರತದ ರಾಷ್ಟ್ರೀಯತಾ ಸಮಸ್ಯೆ ಪರಿಹಾರವಾಗಲಾರದು. ಯಾಕೆಂದರೆ ಬೇರೆಲ್ಲಾ ಜನ ವಿಭಾಗಗಳು ಸ್ಥಳೀಯ ರಾಷ್ಟ್ರೀಯ ಸಂಕುಚಿತತೆಯಲ್ಲಿ ಕೊಚ್ಚಿ ಹೋಗುವ ಸಂಭವವಿದೆ.

ಕೇಂದ್ರ ಸರಕಾರ ಪ್ರಮುಖ ಅಪರಾಧಿ

ರಾಷ್ಟ್ರೀಯತಾ ಸಮಸ್ಯೆಗೆ ಸಂಬಂಧಪಟ್ಟಂತೆ ಕಾರ್ಮಿಕ ವರ್ಗದ ವಿಶೇಷ ಜವಾಬ್ದಾರಿಯನ್ನು ನಮ್ಮ ಪಕ್ಷ ಪೂರ್ಣವಾಗಿ ಅರಿತುಕೊಂಡಿದೆ. 1972 ರಲ್ಲಿ ನಮ್ಮ ಪಕ್ಷದ ಒಂಭತ್ತನೇ ಅಧಿವೇಶನ "ಭಾರತದಲ್ಲಿ ರಾಷ್ಟ್ರ ಪ್ರಶ್ನೆಯ ಕುರಿತು ಟಿಪ್ಪಣಿ" ಯನ್ನು ಅಂಗೀಕರಿಸಿತು. ಅದು ಹೀಗನ್ನುತ್ತದೆ— "ಕಾರ್ಮಿಕ ವರ್ಗ ಮತ್ತು ಅದರ ನೈಜ ಕಮ್ಯುನಿಸ್ಟ್ ಪಕ್ಷ ಭಾರತ ಸಂಘದ ರಾಜ್ಯಗಳ ನಿಜವಾದ ಸಮಾನತೆ ಮತ್ತು ಸ್ವಯಮಾಧಿಕಾರವನ್ನು ನಿಸ್ಸಂದಿಗ್ಧ ರೀತಿಯಲ್ಲಿ ಸಮರ್ಥನೆ ಮಾಡಬೇಕು. ಮತ್ತು ರಾಷ್ಟ್ರೀಯ ದಮನ ವ್ಯಕ್ತಗೊಳ್ಳುವ ಯಾವುದೇ ಮತ್ತು ಪ್ರತಿಯೊಂದು ಸಂದರ್ಭದಲ್ಲೂ ವಿರೋಧಿಸಬೇಕು. ಆದರೂ ಅದೇ ಸಮಯದಲ್ಲಿ ಸಂಕುಚಿತ ರಾಷ್ಟ್ರವಾದಿಗಳು ಮತ್ತು ಆಕ್ರಮಕ ಬುದ್ಧಿಯ ಸಂಕುಚಿತವಾದಿಗಳಿಂದ ಭಾರತದ ಕಾರ್ಮಿಕ ವರ್ಗದ ಮತ್ತು ಶ್ರಮಜೀವಿ ಜನತೆಯ ಐಕ್ಯತೆಗೆ ಬೆದರಿಕೆಬಂದಿರುವ ಅಪಾಯಕಾರೀ ಬೆಳವಣಿಗೆಗಳನ್ನು ಅದು ಗಂಭೀರವಾಗಿ ಗಮನಿಸದೇ ಇರಲೂ ಸಾಧ್ಯವಿಲ್ಲ. ಸಾರ್ವಜನಿಕ ವಲಯದಲ್ಲಿ ಒಂದು ಉಕ್ಕು ಸ್ಥಾವರ ಅಥವಾ ತೈಲ ಕಾರ್ಖಾನೆ ಅಥವಾ ಬಂದರು ಕಟ್ಟೆಯ ಒಂದು ಪ್ರಮುಖ ಕೈಗಾರಿಕೆ ಸ್ಥಾಪಿಸುವುದು ಮುಂತಾದ ಹಲವು ಪ್ರಶ್ನೆಗಳನ್ನು ದುರುಪಯೋಗ ಪಡಿಸಿಕೊಂಡು ಒಂದು ಭಾಷಾ ರಾಜ್ಯದ ಜನತೆಯನ್ನು ಕೇಂದ್ರದ ವಿರುದ್ಧ ಅಥವಾ ಕೆಲವು ಸೋದರ ರಾಜ್ಯಗಳ ವಿರುದ್ಧ ಎತ್ತಿಬಿಡಿಸಲಾಗುತ್ತಿದೆ. ರಾಜ್ಯಗಳ ನಡುವಿನ ಗಡಿ ವಿವಾದಗಳನ್ನು ರಾಷ್ಟ್ರೀಯ ಆಕ್ರಮಕ ಸಂಕುಚಿತವಾದವನ್ನೂ ಹೊಡೆದೆಬ್ಬಿಸಲು ಬಳಸಲಾಗುತ್ತಿದೆ. ಆದರೆ ವಿವಾದಗಳಿಗೆ ಒಂದು ನೀತಿ ಬದ್ಧ ಪರಿಹಾರವನ್ನು ಜ್ಯಾರಿಗೆ ತರಲು ತನ್ನ ಸಮಯಸಾಧಕತನದಿಂದಾಗಿ ನಿರಾಕರಿಸುವ ಕೇಂದ್ರ ಸರಕಾರ ಇಲ್ಲಿ ಮುಖ್ಯ ಅಪರಾಧಿ ಎಂಬುದರತ್ತ ಗಮನ ನೀಡುತ್ತಿಲ್ಲ. ಪ್ರಮುಖ ಕೈಗಾರಿಕ ಕೇಂದ್ರಗಳಲ್ಲಿ ನಗರ ಪ್ರದೇಶದ ನಿರುದ್ಯೋಗಕ್ಕೆ ಒಂದಿಲ್ಲೊಂದು ಭಾಷಾ ಗುಂಪು ತಂಡ-ತಂಡವಾಗಿ ಅಲ್ಲಿ ಬಂದುದೇ ಕಾರಣವೆಂದು ಹೇಳಿ ಜನರ ವರ್ಗ ಮತ್ತು ಸಾಮೂಹಿಕ ಸಂಘಟನೆಗಳನ್ನು ಛಿದ್ರಗೊಳಿಸಲು ಅಲ್ಪಸಂಖ್ಯಾತ-ವಿರೋಧೀ ಗಲಭೆಗಳನ್ನು ನಡೆಸಲಾಗುತ್ತಿದೆ. ಕೇಂದ್ರದಲ್ಲಿ ಹಾಗೂ ವಿವಿಧ ರಾಜ್ಯಗಳ ಸರಕಾರಿ ಸೇವೆಯಲ್ಲಿರುವ ವಿವಿಧ ಭಾಷಾ ಹಾಗೂ ರಾಷ್ಟ್ರೀಯ ಗುಂಪುಗಳು ಬಹುಗಾಗಿ ಸಂಕುಚಿತ ರಾಷ್ಟ್ರವಾದ ಮತ್ತು ಆಕ್ರಮಕ ಸಂಕುಚಿತವಾದಕ್ಕೆ ಬಲಿಯಾಗುತ್ತವೆ ತನ್ಮೂಲಕ ಭಾರತ ಸಂಘದ ವಿಭಿನ್ನ ರಾಷ್ಟ್ರೀಯ ಗುಂಪುಗಳ ನಡುವೆ ಅಪನಂಬಿಕೆ ಮತ್ತು

ವೈರವನ್ನು ಪೋಷಿಸಲಾಗುತ್ತಿದೆ. ಒಂದೇ ಭಾಷೆಯನ್ನಾಡುವ ರಾಷ್ಟ್ರೀಯ ಗುಂಪುಗಳನ್ನೂ ಕೂಡಾ ವಿಚ್ಛಿದ್ರಗೊಳಿಸಲು ಮರೆಯಲ್ಲಿರುವ ಧಾರ್ಮಿಕ ದುರುಪಯೋಗ ಪಡೆಯಲಾಗುತ್ತಿದೆ. ಪಂಜಾಬಿನಲ್ಲಿ ಇದನ್ನು ಕಾಣಬಹುದಾಗಿದೆ. ಒಂದೇ ರಾಷ್ಟ್ರೀಯ ಗುಂಪಿನ ಒಂದು ಪ್ರದೇಶವನ್ನು ಇನ್ನೊಂದು ಪ್ರದೇಶದ ವಿರುದ್ಧ ಎತ್ತಿ ಕಟ್ಟಲು ಕೂಡಾ ಪರಸ್ಪರ ಕಾದಾಡುತ್ತಿರುವ ಬೂರ್ಜ್ವಾ-ಭೂಮಾಲಕ ಒಳ ಗುಂಪುಗಳು ಹಿಂಜರಿಯುವುದಿಲ್ಲ. ಆಂಧ್ರದಲ್ಲಿ ಪ್ರತ್ಯೇಕ ತೆಲಂಗಾಣಾ ರಾಜ್ಯದ ಘೋಷಣೆಯಲ್ಲಿ ಇದನ್ನು ಕಾಣಬಹುದು. ವಿದರ್ಭದಲ್ಲೇ ಆಗಲಿ, ಸೌರಾಷ್ಟ್ರ ಮುಂತಾದ ಕಡೆಗಳಲ್ಲೇ ಆಗಲಿ ಪ್ರತ್ಯೇಕ ವಾದೀ ಆಂದೋಲನಗಳೆಲ್ಲಾ ವಿಕ್ಷಿಪ್ತ ಮತ್ತು ವಿಕೃತ ರಾಷ್ಟ್ರವಾದದ ಮತ್ತು ಪ್ರಾಂತೀಯವಾದದ ರೂಪ ಧರಿಸುತ್ತವೆ. ಈ ಎಲ್ಲಾ ವಿಚ್ಛಿದ್ರಕಾರೀ ಚಳುವಳಿಗಳನ್ನು ಬಳಸಿ ರಾಜ್ಯಗಳಿಗೆ ನಿಜವಾದ ಸ್ವಯಮಾಧಿಕಾರದ ಸ್ಥಾನಮಾನ ನಿರಾಕರಿಸಲು ಮಾತ್ರವಲ್ಲ, ದೀರ್ಘ ಹಾಗೂ ಕಟು ಹೋರಾಟದ ನಂತರ ಸಾಧಿಸಿದ ರಾಜ್ಯಗಳ ಭಾಷಾವಾರು ಮರು ಸಂಘಟನೆಯನ್ನೂ ಕೂಡಾ ಇಲ್ಲಗೊಳಿಸಲು ಕೇಂದ್ರದ ಹಿರಿ ಬೂರ್ಜ್ವಾ-ಭೂಮಾಲಕ ಮುಖಂಡರು ಹಾಗೂ ಅವರ ಸಮರ್ಥಕರು ಬಯಸುತ್ತಿದ್ದಾರೆ.

ಕಾರ್ಮಿಕವರ್ಗದ ಧೋರಣೆ

“ಭಾರತದ ಕಾರ್ಮಿಕ ವರ್ಗ ತನ್ನ ಸದ್ಯದ ಬೆಳವಣಿಗೆಯ ಘಟ್ಟದಲ್ಲಿ ಈಗ ಒಂದೆಡೆ ಹಿರಿಬೂರ್ಜ್ವಾ ಭೂಮಾಲಕ ವರ್ಗಗಳ ಧೋರಣೆಗಳಿಂದ ಇನ್ನೊಂದೆಡೆ ರಾಜ್ಯಗಳಲ್ಲಿ ಸಂಕುಚಿತ ರಾಷ್ಟ್ರವಾದಿ ಹಾಗೂ ಪ್ರಾದೇಶಿಕ ವಿಚ್ಛಿದ್ರಕಾರೀ ಶಕ್ತಿಗಳಿಂದ ವಿಚ್ಛಿದ್ರತೆ ಮತ್ತು ಒಡಕಿನ ಅಪಾಯವನ್ನು ಎದುರಿಸಬೇಕಾಗಿದೆ. ಆದ್ದರಿಂದ ರಾಷ್ಟ್ರೀಯ ಗುಂಪುಗಳು ಮತ್ತು ಭಾರತ ಒಕ್ಕೂಟದಲ್ಲಿ ಅವುಗಳ ಸಮಗ್ರೀಕರಣದ ಸಮಸ್ಯೆಯ ಕುರಿತು ತನ್ನದೇ ಆದ ವಿಶಿಷ್ಟ ಹಾಗೂ ಮೂರ್ತ ಧೋರಣೆಯನ್ನು ಭಾರತದ ಕಾರ್ಮಿಕ ವರ್ಗ ವಿಕಾಸಗೊಳಿಸಬೇಕಾಗಿ ಬಂದಿದೆ. ಸಂಕುಚಿತ ರಾಷ್ಟ್ರವಾದಿಗಳು ಮತ್ತು ಆಕ್ರಮಕ ಸಂಕುಚಿತ ವಾದಿಗಳು ಮುಂತಾದ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಭಾರತದ ಐಕ್ಯತೆ ಮತ್ತು ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ನೈಜ ಸ್ಫೂರ್ತಿಯಿಂದ ಕಾರ್ಮಿಕ ವರ್ಗವನ್ನು ಸಂಘಟಿಸಿ, ಶಿಕ್ಷಣ ನೀಡಿ ಒಟ್ಟುಗೂಡಿಸುವ ಬದಲು ಕೇವಲ ರಾಷ್ಟ್ರಗಳಿಗೆ ಮತ್ತು ರಾಷ್ಟ್ರೀಯ ಗುಂಪುಗಳಿಗೆ ಸ್ವಯಂ ನಿರ್ಧಾರದ ಹಕ್ಕು ಇದರಲ್ಲಿ ಪ್ರತ್ಯೇಕಗೊಳ್ಳುವ ಹಕ್ಕು ಕೂಡ ಸಹಜವಾಗಿಯೇ ಇದೆ-ಇದೆಯೆಂಬ ಘೋಷಣೆಯನ್ನು ಪುನರುಚ್ಚರಿಸುತ್ತಿದ್ದರೆ ಅದು ಇಂತಹ ವಿಚ್ಛಿದ್ರಕಾರೀ ಶಕ್ತಿಗಳಿಗೆ ರಿಯಾಯ್ತಿ ತೋರಿಸಿದಂತಾಗುತ್ತದೆ.”

ಕಾರ್ಮಿಕವರ್ಗ ಭಾಷಾ ರಾಷ್ಟ್ರೀಯ ಭಾವನೆಗಳಿಂದ ತಾನು ಕೊಚ್ಚಿಹೋಗದಂತೆ ನೋಡಿಕೊಂಡು ತನ್ನ ವರ್ಗ ಒಗ್ಗಟ್ಟನ್ನು ಕಾಯ್ದುಕೊಳ್ಳುತ್ತಲೇ ಇದ್ದರೆ ಪ್ರಜಾಪ್ರಭುತ್ವವಾದೀ ಅಭಿಪ್ರಾಯ ರೂಪಿಸಲು ಮತ್ತು ದಿಕ್ಕುಗೆಡಿಸುವ ಶಕ್ತಿಗಳ ಸವಾಲನ್ನು ಎದುರಿಸಲು ಅದು ಶಕ್ತವಾಗುತ್ತದೆ. ಭಾರತದಲ್ಲಿ ಕಾರ್ಮಿಕವರ್ಗ ಒಟ್ಟು ಜನಸಂಖ್ಯೆಯಲ್ಲಿ ಒಂದು ಸಣ್ಣ ಭಾಗ ಆದ್ದರಿಂದ ಅದು ತನ್ನ ಕ್ರಿಯೆ ಮತ್ತು ಕೃತಿಗಳ ಮೂಲಕ ವಿಶಾಲ ಜನಸ್ತೋಮಕ್ಕೆ, ವಿಶೇಷವಾಗಿ ರೈತ ಮತ್ತು ಗ್ರಾಮಾಂತರ ಜನಸಮೂಹಗಳಿಗೆ ಸ್ಫೂರ್ತಿ ನೀಡದಿದ್ದರೆ ರಾಷ್ಟ್ರೀಯ ಐಕ್ಯತೆಯ ಯುದ್ಧ ತುಂಬಾ ಕಷ್ಟದಾಯಕ.

ಅನುಕೂಲ ಸನ್ನಿವೇಶ

ಅದೇ ಹೊತ್ತಿಗೆ ಒಂದು ವಿಷಯ ತಿಳಿದುಕೊಳ್ಳಬೇಕು ಅದೇನೆಂದರೆ ಪರಿಸ್ಥಿತಿಗಳು ಕಾರ್ಮಿಕ ವರ್ಗ ಮತ್ತು ಅದರ ಪಕ್ಷಕ್ಕೆ ಅನುಕೂಲಕಾರಿಯಾಗಿದೆ. ಸಾಮ್ರಾಜ್ಯಶಾಹೀ ವಿರೋಧಿ ಐಕ್ಯತೆ, ರಾಷ್ಟ್ರೀಯ ಐಕ್ಯತೆಯ ಪರಂಪರೆ ಜನತೆಯ ಮನದಲ್ಲಿ ಇನ್ನೂ ಬಲವಾಗಿದೆ. ಒಂದಾದನಂತರ ಇನ್ನೊಂದು ಕಾಂಗ್ರೆಸ್ ಸರ್ಕಾರಗಳು ವಿಚ್ಛಿದ್ರಕಾರೀ ಧೋರಣೆಗಳನ್ನು ಅನುಸರಿಸಿದರೂ ಕೂಡ ಕೆಲವು ರಾಜ್ಯಗಳಲ್ಲಿ ಭಾಷಾ ಹಾಗೂ ಪ್ರಾದೇಶಿಕ ಸಂಕುಚಿತವಾದ ಮತ್ತು ವಿಯೋಜಕ ಪ್ರವೃತ್ತಿ ತಲೆಯೆತ್ತಿದ್ದರೂ ಕೂಡಾ ವ್ಯಾಪಕವಾಗಿರುವ ಪ್ರಜಾಪ್ರಭುತ್ವ ವಾದೀ ಆಂದೋಲನ ರಾಷ್ಟ್ರೀಯ ಐಕ್ಯತೆಯ ಪರ ನಿಲ್ಲುತ್ತದೆ, ಅದನ್ನು ಬೆಂಬಲಿಸುತ್ತದೆ. ರಾಷ್ಟ್ರೀಯ ಐಕ್ಯತೆಯ ಈ ಅಭೀಪ್ಸೆಯನ್ನು ಕಾರ್ಮಿಕ ವರ್ಗ ಎಲ್ಲಾ ರಾಷ್ಟ್ರೀಯ ಗುಂಪುಗಳ ಸಮಾನತೆಯ ಬೇಡಿಕೆಗಳೊಂದಿಗೆ ಸಮ್ಮಿಳನಗೊಳಿಸಬೇಕು. ಆಳುವ ವರ್ಗಗಳು ಮತ್ತು ಸ್ಥಳೀಯ ಸಂಕುಚಿತ ವಾದಿ ರಾಷ್ಟ್ರೀಯ ಐಕ್ಯತೆಯ ಭಾವನೆಯನ್ನು ಪ್ರತಿದಿನ ಸವೆಸುತ್ತಿದ್ದರೂ ಕೂಡಾ ಅದನ್ನು ಬುಡಮೇಲು ಮಾಡುವಲ್ಲಿ ಅವರು ಸಫಲರಾಗಿಲ್ಲ.

ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಮುನ್ನಡೆಗಾಗಿ ಜನಸಮೂಹ ನಡೆಸುತ್ತಿರುವ ಪ್ರಜಾಪ್ರಭುತ್ವವಾದೀ ಆಂದೋಲನ ಐಕ್ಯತೆಯ ಭಾವನೆಯನ್ನು ಕಾಪಾಡುವಲ್ಲಿ ಒಂದು ಶಕ್ತಿ ಶಾಲೀ ಅಂಶವಾಗಿ ದುಡಿಯುತ್ತಿದೆ ಈ ದೃಷ್ಟಿಯಲ್ಲಿ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅದರ ಚಟುವಟಿಕೆಗಳು ಮಹತ್ವ-ಪೂರ್ಣ. ಭಾರತ ವಿದ್ಯಾರ್ಥಿ ಫೆಡರೇಶನ್, ಭಾರತ ಪ್ರಜಾಪ್ರಭುತ್ವ ವಾದೀ ಯುವಜನ ಒಕ್ಕೂಟ, ಅಖಿಲ ಭಾರತ ಪ್ರಜಾಪ್ರಭುತ್ವ ವಾದೀ ಮಹಿಳೆಯರ ಸಂಘ ಇತ್ಯಾದಿ ಅಖಿಲ ಭಾರತ ಸಂಘಟನೆಗಳು ಭಾಷಾ ವಿಚ್ಛಿದ್ರತೆ ಮತ್ತು ಪ್ರತ್ಯೇಕತೆಯ ವಿರುದ್ಧ ಹೋರಾಟ ಬಲಗೊಳಿಸಲು ನೆರವಾಗುತ್ತವೆ. ಇತರ ಪಕ್ಷಗಳ ನೇತೃತ್ವದಲ್ಲಿರುವ ಅಖಿಲ ಭಾರತ ಸಾಮೂಹಿಕ ಸಂಘಟನೆಗಳೂ ಚಟುವಟಿಕೆಗಳೂ ಸರ್ವಸಾಮಾನ್ಯ ಐಕ್ಯತೆಯ ಒಂದು ಭಾವನೆಯನ್ನು ಸೃಷ್ಟಿಸುವಲ್ಲಿ ನೆರವಾಗುತ್ತವೆ.

ಬೂರ್ಜ್ವಾ ಪ್ರಭುತ್ವದ ಉದಯದೊಂದಿಗೆ

ಈ ಸಮಸ್ಯೆಯ ತಿರುಳೇನು? ನಾವು ಮಾರ್ಕ್ಸ್‌ವಾದೀ-ಲೆನಿನ್‌ವಾದಿಗಳಾಗಿ ಅದನ್ನು ಹೇಗೆ ಕಾಣುತ್ತೇವೆ? ನಮ್ಮ ಸಂವಿಧಾನದ ಆಚೆ ನೋಡಲಾರದವರು, ಇದು ಕಾಂಗ್ರೆಸ್ ನಾಯಕರಷ್ಟೇ ಸೃಷ್ಟಿಸಿದ ಒಂದು ಸಮಸ್ಯೆ ಎಂದು ಕಾಣುವವರು ಒಂದು ವಿಚಾರದ ಬಗ್ಗೆ ಕುರುಡಾಗಿದ್ದಾರೆ. ಅದೇನೆಂದರೆ ಇಂತಹ ಸಮಸ್ಯೆಗಳನ್ನು ಭಾರತದಲ್ಲಷ್ಟೇ ಅಲ್ಲ, ಇನ್ನೂ ಹಲವಾರು ದೇಶಗಳಲ್ಲಿ ಆಳುವ ಬೂರ್ಜ್ವಾ ವರ್ಗದ ಮತ್ತು ಅದರ ಸ್ನೇಹಿತರು ಸೃಷ್ಟಿಸಿದ್ದಾರೆ. ಇಲ್ಲಿಯ ಮುಖ್ಯ ಪ್ರಶ್ನೆ ಕಾಂಗ್ರೆಸ್ ಸರಕಾರಗಳು ಮೊದಲಿನ ಅಭಿಪ್ರಾಯವನ್ನು ಒಂದು ಒಕ್ಕೂಟ ಸಂವಿಧಾನ ಬಗ್ಗೆ ಇತ್ತ ಭರವಸೆಯನ್ನು ಉಲ್ಲಂಘಿಸಿದ್ದಾರೆಯೇ ಎಂಬುದಲ್ಲ; ಬದಲಿಗೆ ಒಂದು ಪ್ರಭುತ್ವದಲ್ಲಿ ಭಾಷಾ ರಾಷ್ಟ್ರೀಯತೆಗಳ ಪ್ರಜಾಪ್ರಭುತ್ವವಾದೀ ಹಕ್ಕುಗಳ ಸಮಸ್ಯೆಯನ್ನು ಎದುರಿಸುವಾಗ ಬೂರ್ಜ್ವಾ-ಭೂಮಾಲಕ ಆಳುವ ವರ್ಗಗಳು ಹೇಗೆ ವರ್ತಿಸುತ್ತವೆ ಎನ್ನುವುದು ಮುಖ್ಯ ಅಂಶ.

> ಕಾರ್ಮಿಕರ ಅಖಿಲ ಭಾರತ ಸಂಘಟನೆಗಳಿಗೆ ಅಖಿಲ ಭಾರತ ದೃಷ್ಟಿ ಕೋನ, ವರ್ಗ ಐಕ್ಯತೆಯೊಂದಿಗೆ ರಾಷ್ಟ್ರೀಯ ಸಮಾನತೆಯನ್ನು ಮಿಳನಗೊಳಿಸುವ ದೃಷ್ಟಿ ಕೋನ ಇದೆ. ಏಕೀಕರಣಗೊಳಿಸುವ ತನ್ನ ಪಾತ್ರವನ್ನು ಕಾರ್ಮಿಕ ವರ್ಗ ವಹಿಸದೇ ಇದ್ದರೆ ಭಾರತದ ರಾಷ್ಟ್ರೀಯತಾ ಸಮಸ್ಯೆ ಪರಿಹಾರವಾಗಲಾರದು. ಯಾಕೆಂದರೆ ಬೇರೆಲ್ಲಾ ಜನ ವಿಭಾಗಗಳು ಸ್ಥಳೀಯ ರಾಷ್ಟ್ರೀಯ ಸಂಕುಚಿತತೆಯಲ್ಲಿ ಕೊಚ್ಚಿ ಹೋಗುವ ಸಂಭವವಿದೆ.

ರಾಷ್ಟ್ರಗಳು ಮತ್ತು ರಾಷ್ಟ್ರೀಯತೆಗಳು ರೂಪಗೊಳ್ಳುವ ಪ್ರಕ್ರಿಯೆಗಳ ಗುಣವಿವರಣೆಯನ್ನು ಎಂಗೆಲ್ಸ್ ಕೊಟ್ಟಿರುವರೀತಿಯಿಂದು-“ಮಧ್ಯಯುಗದ ಕೊನೆಯಿಂದ ಆರಂಭಗೊಂಡು ಚರಿತ್ರೆ ಯೂರೋಪಿನಲ್ಲಿ ದೊಡ್ಡ ರಾಷ್ಟ್ರ ಪ್ರಭುತ್ವಗಳನ್ನು ರೂಪಿಸುವ ದಿಕ್ಕಿನಲ್ಲಿ ದುಡಿಯುತ್ತಿತ್ತು. ಇಂತಹ ಪ್ರಭುತ್ವಗಳೆಲ್ಲಾ ಆಳುವ ಬೂರ್ಜ್ವಾ ವರ್ಗದ ಸಾಮಾನ್ಯ ರಾಜಕೀಯ ಸಂರಚನೆಗಳು. ಅದೇ ವೇಳೆಗೆ, ಇದು ಕಾರ್ಮಿಕ ವರ್ಗದ ಆಳ್ವಿಕೆಗೆ ಅತೀ ಅಗತ್ಯವಾದ ಸಮರಸಪೂರ್ಣ ಅಂತರಾಷ್ಟ್ರೀಯ ಸಹಕಾರದ ಸ್ಥಾಪನೆಗೆ ಅಗತ್ಯವಾದ ಒಂದು ಶರತ್ತು ಕೂಡಾ. ಅಂತರಾಷ್ಟ್ರೀಯ ಶಾಂತಿಯ ಭರವಸೆ ಈಡೇರಬೇಕಾದರೆ, ತಪ್ಪಿಸಲು ಸಾಧ್ಯವಿರುವ ಎಲ್ಲಾ ರಾಷ್ಟ್ರೀಯ ಘರ್ಷಣೆಗಳನ್ನು ಮುಗಿಸಿಬಿಡಬೇಕು, ಪ್ರತಿಯೊಂದು ಜನಸಮೂಹವೂ ಸ್ವತಂತ್ರ ಮತ್ತು ತನ್ನ ಗೃಹ ಸ್ವಾಮಿ ತಾನೇ ಆಗಿರಬೇಕು. ವಾಣಿಜ್ಯ, ಕೈಗಾರಿಕೆ, ಕೃಷಿಯ ಬೆಳವಣಿಗೆಯೊಂದಿಗೆ ಬೂರ್ಜ್ವಾ ವರ್ಗದ ಸಾಮಾಜಿಕ ಸಾಮರ್ಥ್ಯ ಬೆಳವಣಿಗೆ ಹೊಂದಿದಂತೆ ಎಲ್ಲೆಡೆಯೂ ರಾಷ್ಟ್ರೀಯ ಭಾವನೆಗಳು ಜಾಗೃತಗೊಂಡವು”, ವಿಭಜನೆಗೊಂಡಿದ್ದ ಮತ್ತು ಅನೇರೀತಿ ದಮನಕೊಳಗಾಗಿದ್ದ ರಾಷ್ಟ್ರಗಳು ಐಕ್ಯತೆ ಮತ್ತು ಸ್ವಾಧೀನತೆಯ ಬೇಡಿಕೆ ಮುಂದಿಡಲಾರಂಭಿಸಿದವು.

“ಆದ್ದರಿಂದ 1848 ರ ಕ್ರಾಂತಿಯ ಉದ್ದೇಶ ಸ್ವಾತಂತ್ರ್ಯದ ಬೇಡಿಕೆಯಾಗಿದ್ದಷ್ಟೇ ಫ್ರಾನ್ಸ್ ಬಿಟ್ಟು ಇತರೆಲ್ಲಾ ಕಡೆಗಳಲ್ಲಿ ರಾಷ್ಟ್ರೀಯ ಬೇಡಿಕೆಗಳ ಈಡೇರಿಕೆಯೂ ಅದರ ಉದ್ದೇಶವಾಗಿತ್ತು.” (ಮಾರ್ಕ್ಸ್ ಮತ್ತು ಎಂಗೆಲ್ಸ್,Selected Works)

ಭಾಷಾ ಪ್ರದೇಶ ಮತ್ತು ಬೂರ್ಜ್ವಾ ಬೆಳವಣಿಗೆ

ಹೀಗೆ ಈ ಪ್ರಶ್ನೆಗೂ ಊಳಿಗಮಾನ್ಯ ವ್ಯವಸ್ಥೆಯ ಅವಸಾನದ ನಂತರ ರಾಷ್ಟ್ರೀಯ ಬಂಡವಾಳ ಶಾಹೀ ಪ್ರಭುತ್ವದ ಉದಯಕ್ಕೂ ಸಂಬಂಧವಿದೆ ಲೆನಿನ್ ಹೇಳಿರುವಂತೆ, “ಜಗತ್ತಿನಾದ್ಯಂತ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಬಂಡವಾಳ ಶಾಹೀ ವ್ಯವಸ್ಥೆಯ ಅಂತಿಮ ವಿಜಯದ ಕಾಲ ಘಟ್ಟಕ್ಕೂ ರಾಷ್ಟ್ರೀಯ ಆಂದೋಲನಗಳಿಗೂ ಪರಸ್ಪರ ಸಂಬಂಧ ಕಾಣುತ್ತದೆ. ಸರಕು ಉತ್ಪಾದನೆ ಪೂರ್ಣವಾಗಿ ವಿಜಯ ಸಾಧಿಸಬೇಕಾದರೆ ಆಂತರಿಕ ಮಾರುಕಟ್ಟೆಯನ್ನು ಅದು ಸ್ವಾಧೀನ ಪಡಿಸಿಕೊಳ್ಳಬೇಕು; ಮತ್ತು ಒಂದೇ ಭಾಷೆಯನ್ನಾಡುವ, ಆ ಭಾಷೆಯ ಬೆಳವಣಿಗೆಗೆ ಅದರ ಸಾಹಿತ್ಯದ ಕ್ರೋಢೀಕರಣಕ್ಕೆ ಅಡ್ಡಿಯಾಗುವ ಎಲ್ಲಾ ತೊಂದರೆಗಳನ್ನು ನಿವಾರಿಸಿದ ರಾಜಕೀಯವಾಗಿ ಏಕೀಕರಣಗೊಂಡ ಪ್ರದೇಶಗಳಿರಬೇಕು. ರಾಷ್ಟ್ರೀಯ ಆಂದೋಲನಗಳ ಆರ್ಥಿಕ ತಳಗಟ್ಟು ಇದೇ. ಭಾಷೆ ಮಾನವನ ಅಂತರ್ಮಿಳನದ ಒಂದು ಅತ್ಯಂತ ಮಹತ್ವ ಪೂರ್ಣ ಸಾಧನ. ಆಧುನಿಕ ಬಂಡವಾಳ ಶಾಹಿಗೆ ಅಗತ್ಯವಾದಷ್ಟು ವ್ಯಾಪಕ ಪ್ರಮಾಣದಲ್ಲಿ ನಿಜವಾಗಿಯೂ ಸ್ವತಂತ್ರವಾದ, ವ್ಯಾಪಕವಾದ ವಾಣಿಜ್ಯ ಬೆಳೆಯಬೇಕಾದರೆ, ವಿವಿಧ ವರ್ಗಗಳಲ್ಲಿ ಜನ ಸಮೂಹದ ಸ್ವತಂತ್ರವಾದ, ವಿಶಾಲವಾದ ಗುಂಪುಗಳು ರೂಪುಗೊಳ್ಳಬೇಕಾದರೆ ಮತ್ತು ಕೊನೆಯದಾಗಿ ಮಾರುಕಟ್ಟೆ ಹಾಗೂ ಪ್ರತಿಯೊಬ್ಬ ಒಡೆಯುವ— ಆತನು ದೊಡ್ಡವನಾಗಿರಲಿ, ಸಣ್ಣವನಾಗಿರಲಿ—ನಡುವೆ, ಮಾರಾಟಗಾರ ಮತ್ತು ಕೊಂಡುಕೊಳ್ಳುವವನ ನಡುವೆ ನಿಕಟ ಸಂಪರ್ಕ ಸ್ಥಾಪಿಸಬೇಕಾದರೆ ಐಕ್ಯತೆ ಮತ್ತು ಏನೊಂದೂ ಅಡ್ಡಿ ಆತಂಕವಿಲ್ಲದೆ ಭಾಷೆಯ ಬೆಳವಣಿಗೆ ಅತ್ಯಂತ ಅಗತ್ಯವಾದ ಅಂಶಗಳು. (Collected Works)

ಇಲ್ಲಿ ಒಂದು ರಾಷ್ಟ್ರೀಯ ಪ್ರಭುತ್ವದ ಸ್ಥಾಪನೆಯಲ್ಲಿ ಭಾಷೆ ಮತ್ತು ಒಂದು ಸಮರೂಪದ ಭಾಷಾ ಪ್ರದೇಶ ವಹಿಸುವ ಪಾತ್ರ ಹಾಗೂ ಇದಕ್ಕೂ ಬಂಡವಾಳ ಶಾಹಿಯ ಮತ್ತು ಮಾರುಕಟ್ಟೆಯ ಬೆಳವಣಿಗೆಗೂ ಇರುವ ಸಂಬಂಧದ ರೂಪರೇಷೆ ಸಿಗುತ್ತದೆ.

ಬಹು ಭಾಷಾ ಪ್ರಭುತ್ವಗಳಲ್ಲಿ....

ಆದರೆ ಬಳಹಷ್ಟು ಪ್ರಭುತ್ವಗಳು ಏಕ ಭಾಷೀಯವಾಗಿರಲಿಲ್ಲ. ಆದ್ದರಿಂದ ತಮ್ಮದೇ ಆದ ಸಮಸ್ಯೆಗಳು ಅವುಗಳಿದ್ದವು. ಹೊಸದಾಗಿ ವಿಮೋಚನೆಗೊಂಡ ಭಾರತದಲ್ಲಿ ಹಲವು ರಾಷ್ಟ್ರೀಯ ಗುಂಪುಗಳಿದ್ದವು. ಬ್ರಿಟಿಶರನ್ನು ಓಡಿಸಿದ ನಂತರ ರಚನೆಗೊಂಡ ರಾಷ್ಟ್ರೀಯ ಪ್ರಭುತ್ವ ವಿಭಿನ್ನ ಭಾಷಾ ಗುಂಪುಗಳ ಅಸ್ತಿತ್ವವನ್ನು ಎದುರಿಸಬೇಕಾಗಿತ್ತು. ಇಲ್ಲಿನ ಸಮಸ್ಯೆಯೆಂದರೆ ಒಂದು ಬೂರ್ಜ್ವಾ-ಭೂಮಾಲಕ ಆಳ್ವಿಕೆಯು ವಿವಿಧ ಭಾಷಾ ಘಟಕಗಳ ನಡುವೆ ಐಕ್ಯತೆಯ ಮತ್ತು ಸಮಾನತೆಯ ಭಾವವನ್ನು ಕಾಪಾಡಿಕೊಳ್ಳುವುದು ಹೇಗೆ, ಅಸಮಾನತೆಯ ಭಾವ ಈ ಪ್ರಭುತ್ವದ ಐಕ್ಯತೆಯನ್ನು ಮೀರಿ ಹೋಗಿ ಅದರ ವಿಘಟನೆಯಾಗದಂತೆ ನೋಡಿಕೊಳ್ಳುವುದು ಹೇಗೆ ಎಂಬುದೆ ಆಗಿದೆ.

ಬೂರ್ಜ್ವಾ—ಭೂಮಾಲಕ ಕೂಟವನ್ನು ಪ್ರತಿನಿಧಿಸುವ ಕಾಂಗ್ರೆಸ್ಸಿನ ನಾಯಕರು ಆದಾಗಲೇ ಭಾರತ ಒಂದು ರಾಷ್ಟ್ರ, ಎಂಬ ವಿಚಾರವನ್ನು ಅದರ ಭಿನ್ನ-ವಿಭಿನ್ನ ಘಟಕಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಬೆಳೆಸಿದ್ದರು. ಅವರ ಮನಸ್ಸಿನಲ್ಲಿ ಅದು ಸಾಮ್ರಾಜ್ಯ ಶಾಹೀ ವಿರೋಧೀ ಹೋರಾಟದ ಪ್ರತಿಬಿಂಬವಾಗಿತ್ತಷ್ಟೆ. ಕೇವಲ ಬೂರ್ಜ್ವಾ ವರ್ಗದ ಅವಶ್ಯಕತೆಗಳಿಗೆ ಅದು ಅನುಕೂಲವಾಗಿತ್ತು. ಯಾಕೆಂದರೆ ದೇಶವನ್ನು ತಾನು ಪೂರ್ಣವಾಗಿ ಲಾಭಗಿಟ್ಟಿಸಿಕೊಳ್ಳಬಹುದಾದ ಒಂದು ವಿಸ್ತಾರವಾದ ಮಾರುಕಟ್ಟೆಯಾಗಿ ಅದು

(7ನೇ ಪುಟ ನೋಡಿ)

ಪ್ರಜಾಪ್ರಭುತ್ವದ ರಕ್ಷಣೆಗಾಗಿ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ

ಸಿಕ್ಕಿಂ, ಕಾಶ್ಮೀರ, ಆಂಧ್ರದ ಸರಕಾರಗಳನ್ನು ಅನ್ಯಾಯವಾಗಿ ವಿಸರ್ಜಿಸಿ ಪ್ರಜಾ ಪ್ರಭುತ್ವವನ್ನು ಕೊಲೆ ಮಾಡಿದ ಇಂದಿರಾ ಗಾಂಧಿಯ ಕೇಂದ್ರ ಸರಕಾರದ ಹಾಗೂ ಆಂಧ್ರದ ರಾಜ್ಯಪಾಲ ರಾಮಲಾಲರ ಕೃತಿಯನ್ನು ಖಂಡಿಸಲು ಕರ್ನಾಟಕ ರಾಜ್ಯಾದ್ಯಂತ ಆಗಸ್ಟ್ 25ರಂದು ಸಂಪೂರ್ಣ ಬಂದ್ ಆಚರಿಸಲಾಗಿತ್ತು. ಇಂದಿರಾಗಾಂಧಿಯ ಸಂವಿಧಾನ ವಿರೋಧಿಯಾದ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸುವ ಸಲುವಾಗಿ ಕರ್ನಾಟಕ ಬಂದನ್ನು ಯಶಸ್ವಿಗೊಳಿಸಿದ ಜನತೆಗೂ, ಕಾರ್ಮಿಕರಿಗೂ, ಯುವಜನ-ವಿದ್ಯಾರ್ಥಿಗಳಿಗೂ ನಾವು ಅಭಿನಂದನೆ ಸಲ್ಲಿಸುತ್ತೇವೆ. ನಮಗೆ ಬಂದ ವರದಿಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಉಡುಪಿ

ಉಡುಪಿ ನಗರ ಹಾಗೂ ತಾಲೂಕಿನಲ್ಲಿ ಸಂಪೂರ್ಣ ಬಂದ್ ಆಚರಿಸಲಾಗಿತ್ತು. ಜನತಾ ಪಕ್ಷದ ಮುಖಂಡರಾದ ಅತ್ತಾಡಿ ಸತೀಶ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು ಡೇವಿಡ್ ಕರ್ಕಡ ಸಿ. ಪಿ. ಐ. (ಎಂ), ಶಂಕರ ಶೆಟ್ಟಿಗಾರ(ಸಿ. ಪಿ. ಐ) ಜಿ. ಎಸ್. ಸುಲೇಮಾನ್ (ಜನತಾ) ವಿಠ್ಠಲ ಶೆಟ್ಟಿಗಾರ (ಬಿ. ಜೆ. ಪಿ.) ಸೋಮಶೇಖರ ಭಟ್ (ನಗರ ಸಭಾಧ್ಯಕ್ಷ)ಮೊದಲಾದವರು ಭಾಷಣ ಮಾಡಿ ಆಂಧ್ರದಲ್ಲಿ ನಡೆದಂತಹ ಪರಿಸ್ಥಿತಿ ಮುಂದೆಂದಿಗೂ ಈ ದೇಶದ ಯಾವುದೇ ಭಾಗದಲಿ ನಡೆಯದಂತೆ ಎಚ್ಚರ ವಹಿಸಬೇಕೆಂದು ಕರೆಕೊಟ್ಟರು.

ಸಿಂಧನೂರು

ಸಿ.ಪಿ.ಐ.(ಎಂ), ಜನತಾ,ಬಿ.ಜೆ.ಪಿ ಪ್ರಾಂತ ರೈತ ಸಂಘ, ವಿದ್ಯಾರ್ಥಿ—ಯುವಜನ ಫೆಡರೇಶನ್, ಕಾರ್ಮಿಕ ಸಂಘಟನೆಗಳೆಲ್ಲ ಆಗಸ್ಟ್ 25 ರಂದು ಸಂಪೂರ್ಣ ಬಂದ್‌ಗೆ ಕರೆ ಕೊಟ್ಟಿದ್ದು, ಇಂದಿರಾ ನೀತಿಯನ್ನೂ, ಆಂಧ್ರದ ಎನ್. ಟಿ. ಆರ್, ಸರ್ಕಾರದ ವಿಸರ್ಜನೆಯನ್ನು ಖಂಡಿಸಲು ಸಂಪೂರ್ಣ ಬಂದ್ ಆಚರಿಸಲಾಯಿತು. ಮೆರವಣಿಗೆಯ ನಂತರ ಸೇರಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಎನ್. ದೊಡ್ಡನಗೌಡ (ಜನತಾ) ಸ್ವಾಮಿರಾವ್, (ಬಿ. ಜೆ. ಪಿ.) ಜನತಾ ಶಾಸಕ ಎಂ. ಮಲ್ಲಪ್ಪ, ಬಿ. ಲಿಂಗಪ್ಪ ಸಿ. ಪಿ. ಐ. (ಎಂ), ಪ್ರಾಂತ ರೈತ ಸಂಘದ ಕೆ. ಜೀವ ರಾಜು, ಮೊದಲಾದವರು ಭಾಷಣ ಮಾಡಿ ಸರ್ವಾಧಿಕಾರದ ವಿರುದ್ಧ ಕೂಗು ಭಾರತದಾದ್ಯಂತ ಇನ್ನೂ ಉಗ್ರ ರೂಪದಲ್ಲಿ ಬೆಳೆದು ಬರಲೆಂದು ಹಾರೈಸಿ, ಕರ್ನಾಟಕದಲ್ಲಿ ಇಂದಿರಾ ಕರಾಳ ಹಸ್ತ ಚಾಚದಂತೆ ಎಚ್ಚರಿಕೆ ವಹಿಸಬೇಕೆಂದು ಕೇಳಿಕೊಂಡರು.

ಗುಲ್ಬರ್ಗಾ

ಗುಲ್ಬರ್ಗಾದಲ್ಲಿ ನಡೆದ ಯಶಸ್ವೀ ಬಂದ್ ಕಾರ್ಯಕ್ರಮದಲ್ಲಿ ಸಿ.ಪಿ.ಐ. (ಎಂ), ಎಂ. ಎಸ್. ಕೆ. ಮಿಲ್ ಕೆಲಸಗಾರರಲ್ಲದೆ ಎಸ್. ಎಫ್. ಐ. ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡಿದ್ದರು. ಮುಂಜಾನೆ 7 ಗಂಟೆಗೆ ಮಿಲ್ಲಿನಿಂದ ಕಾಲೇಜಿನಿಂದ ಎಸ್.ಎಫ್. ಐ ಯ ಪ್ರತಿ ಭಟನಾ ಮೆರವಣಿಗೆ ಹೊರಟು ಎಲ್ಲ ಹಾಸ್ಟೆಲ್ ಹಾಗೂ ಕಾಲೇಜುಗಳ ವಿದ್ಯಾರ್ಥಿಗಳನ್ನೂ ಸೇರಿಸಿಕೊಂಡು ವಿರೋಧ ಪಕ್ಷಗಳ ಬ್ರಹತ್ ಮೆರವಣಿಗೆಯಲ್ಲಿ ಸೇರಿಕೊಂಡಿತು.

ಹರಪನಹಳ್ಳಿ

ದಿನಾಂಕ 25-8-84 ರಂದು ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಪ್ರತಿಭಟನಾದಿನಾಚರಣೆ ಕರೆಯ ಮೇರೆಗೆ ಹರಪನ ಹಳ್ಳಿಯಲ್ಲಿ ಬಂದ್ ಕಾರ್ಯಕ್ರಮವನ್ನು ನಡೆಸಲಾಯ್ತು. ಜನತಾಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ಪ್ರಾಂತ ರೈತ ಸಂಘ, ಭಾರತವಿದ್ಯಾರ್ಥಿ ಫೆಡರೇಷನ್ ಸೇರಿ ಸಂಪೂರ್ಣ ಬಂದ್ ಆಚರಿಸಲಾಯಿತು. ಮೆರವಣಿಗೆಯ ನಂತರ ಸಂತೆ ಬಯಲಿನಲ್ಲಿ ಬೃಹತ್ ಸಭೆಯಲ್ಲಿ ಜನತಾ ಪಕ್ಷದ ಶ್ರೀ ದಿವಾಕರ್ ವಕೀಲರು, ಸಿ. ಪಿ. ಐ.(ಎಂ) ನ ಕಾ. ಪಿ. ಆರ್. ವೆಂಕಟೇಶ್, ಪ್ರಾಂತ ರೈತ ಸಂಘದ ಕಾ. ಪರಶುರಾಮ್ ಎಸ್. ಎಫ್. ಐ. ಯ ಕಾ. ಕೃಷ್ಣಜಿ ಕಲಾಲ್ ಮಾತನಾಡಿದರು.

ಹಡಗಲಿ

ದಿನಾಂಕ 23-8-84 ರಂದು ವಿರೋಧ ಪಕ್ಷಗಳ ಕರೆಯ ಮೇರೆಗೆ ಹಡಗಲಿ ಬಂದ್ ಆಚರಿಸಲಾಯಿತು. ಜನತಾ ಪಕ್ಷದ ಶ್ರೀ ವೀರನಗೌಡ ವಕೀಲರು, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾ. ಪಿ. ಆರ್. ವೆಂಕಟೇಶ್, ಎಸ್.ಎಫ್.ಐ.ನ ಮೆಹಬೂಬ್ ರಂಗನಾಥ ಹವಲ್ದಾರ್ ಇವರ ಮುಖಂಡತ್ವದಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಿ ಸೊಪ್ಪಿನಮಲ್ಲಪ್ಪನವರ ಕಲ್ಯಾಣ ಮಂಟಪದಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಎಲ್ಲಾ ಮುಖಂಡರೂ ಮಾತನಾಡಿದರು.

ಮಾಗಳ

ದಿನಾಂಕ 25-5-84 ರಂದು ವಿರೋಧ ಪಕ್ಷಗಳ "ಭಾರತ ಬಂದ್" ಕಾರ್ಯಕ್ರಮ ಯಶಸ್ವಿಗೊಳಿಸಲು ಹಡಗಲಿ ತಾಲೂಕಿನ ಮಾಗಳ ಗ್ರಾಮದಲ್ಲಿ ಬಂದ್ ಆಚರಿಸಲಾಯಿತು. ಗೆಳೆಯರ ಬಳಗದ ಮುಖಂಡತ್ವದಲ್ಲಿ ಗ್ರಾಮದಲ್ಲಿ ಮೆರವಣಿಗೆಯನ್ನು ತೆಗೆದು ಸಂಜೆ ನಾಲ್ಕು ಗಂಟೆಗೆ ನಡೆದ ಬಹಿರಂಗ ಸಭೆಯಲ್ಲಿ ಜನತಾ ಪಕ್ಷದ ಮುಖಂಡರಾದ ಶ್ರೀ ವೀರನಗೌಡ, ವಕೀಲರು, ಶ್ರೀ ಜಯಣ್ಣ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾ. ಪಿ ಆರ್ ವೆಂಕಟೇಶ್ ಮಾತನಾಡಿದರು.

ರಾಮದುರ್ಗ

ವಿರೋಧ ಪಕ್ಷಗಳು ಆಗಸ್ಟ್ 25 ರಂದು, ಎನ್. ಟಿ. ರಾಮರಾವ್ ಸರ್ಕಾರ ವಜಾ ವಿರುದ್ಧ ಪ್ರತಿಭಟನಾ ದಿನ ಆಚರಿಸಲು ನೀಡಿದ ಕರೆಯ ಮೇರೆಗೆ ರಾಮದುರ್ಗ(ಬೆಳಗಾವಿಜಿಲ್ಲೆ) ದಲ್ಲಿ ಯಶಸ್ವೀ ಪ್ರತಿಭಟನಾ ದಿನ ಆಚರಿಸಲಾಯಿತು

ರಾಮದುರ್ಗದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ವಿರೋಧ ಪಕ್ಷಗಳು ಒಂದೇ ವೇದಿಕೆಯ ಅಡಿಯಲ್ಲಿ ನಿಂತು ಈ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದವು. ಸ್ವಾತಂತ್ರ್ಯ ನಂತರ ರಾಮದುರ್ಗ ನಗರ ಹಿಂದೆಂದೂ ಕಂಡರಿಯದ ರೀತಿಯ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು. ಈ ಅಪೂರ್ವ ಯಶಸ್ಸಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಎಸ್. ಎಫ್. ಐ ಕಾರ್ಯಕರ್ತರು ವಿಶೇಷವಾಗಿ ಶ್ರಮಿಸಿದರು

ಭಾರೀ ಮೆರವಣಿಗೆ ನಂತರ ಗಾಂಧೀ ಚೌಕದಲ್ಲಿನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಕಾ. ವಿ. ಪಿ. ಕುಲಕರ್ಣಿ ಮತ್ತು ಜನತಾ ಪಕ್ಷದ ಶ್ರೀ ಹಿರೇರೆಡ್ಡಿಯವರು ಮಾತನಾಡಿ ಆಂಧ್ರ ರಾಜ್ಯಪಾಲರ ಪಕ್ಷಪಾತ ವರ್ತನೆಯನ್ನು ಕಟುವಾಗಿ ಖಂಡಿಸಿದರು

ರಾಣೇಬೆನ್ನೂರು

ತಾ॥ 25-8-84 ರ ಭಾರತ ಬಂದ್ ಕಾರ್ಯಕ್ರಮದ ದಿವಸ ನೇಕಾರ ಕಾರ್ಮಿಕರು ಕೆಂಬಾವುಟದೊಂದಿಗೆ ಜನತಾ ಪಕ್ಷದವರ ಕೂಡ ರಾಣೇಬೆನ್ನೂರಿನ ಮುಖ್ಯ ಬೀದಿಗಳಲ್ಲಿ ಕೇಂದ್ರ ಕಾಂಗ್ರೆಸ್ (ಐ) ಸರಕಾರದ ಸರ್ವಾಧಿಕಾರಿ ಧೋರಣೆಯ, ಬೆಲೆ ಏರಿಕೆಯ, ಕಾರ್ಮಿಕ ವಿರೋಧಿ ನೀತಿಯ ಮತ್ತು ಕಾಶ್ಮೀರದ ಫಾರೂಕ್ ಅಬ್ದುಲ್ಲಾ ಮತ್ತು ಆಂಧ್ರದ ಎನ್. ಟಿ. ರಾಮರಾವ್‌ರ ಪ್ರಜಾಸತ್ತಾತ್ಮಕ ಬಹುಮತ ರಾಜ್ಯ ಸರಕಾರಗಳನ್ನು ರಾಜ್ಯಪಾಲರುಗಳ ಮುಖಾಂತರ ಉರುಳಿಸಿದ್ದರ ವಿರುದ್ಧ ಘೋಷಣೆಗಳನ್ನು ಕೂಗುತ್ತ ಬೃಹತ್ ಮೆರವಣಿಗೆ ಮುಖಾಂತರ ತಹಶೀಲದಾರರವರಿಗೆ ಕೇಂದ್ರ ಸರಕಾರದ ಸರ್ವಾಧಿಕಾರಿ ಪ್ರವೃತ್ತಿ ಖಂಡಿಸುತ ಸ್ಥಳೀಯ ಸಮಸ್ಯೆಗಳಾದ ಗುಡಿಸಲು ನಿವಾಸಿಗಳ ಹಕ್ಕುಪತ್ರ ರಸ್ತೆ, ಕಾಲುವೆ, ಬೀದಿ ದೀಪ, ನೀರು, ಶಾಲೆ ಮುಂತಾದ ಅವಶ್ಯಕ ಸೌಲಭ್ಯಗಳನ್ನು ಮಾಡುವದರ ಬಗ್ಗೆ, ವಸತಿ ಸಮಸ್ಯೆಯನ್ನು ನಿವಾರಣೆ ಮಾಡುವದಕ್ಕೆ ಹಾಗೂ ಅಸಂಘಟಿತ ನೇಕಾರ-ಬೀಡಿ, ಮುಂತಾದ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಶೀಘ್ರ ಮಾಡುವದಕ್ಕೆ ಒತ್ತಾಯಿಸಿ ಮನವಿಗಳನ್ನು ಸಲ್ಲಿಸಲಾಯಿತು. ಮುಂದೆ ಬಹಿರಂಗ ಸಭೆಯನ್ನುದ್ದೇಶಿಸಿ, ಶಾಸಕರಾದ ಬಿ. ಜಿ. ಪಾಟೀಲರು ಹಾಗೂ ಕಾಂ॥ ಎಸ್. ಎಫ್ ಕ್ಯಾದಗಿ, ಮುಂತಾದವರು ಮಾತನಾಡಿದರು.

ಮೈಸೂರು

ತಾ॥ 25-8 84 ರಂದು ಆಂಧ್ರದಲ್ಲಿ ಎನ್. ಟಿ ಆರ್. ಸರ್ಕಾರವನ್ನು ವಜಾ ಮಾಡಿದ್ದನ್ನು ಪ್ರತಿಭಟಿಸಲು ಸಂಪೂರ್ಣ ಮೈಸೂರು ಬಂದ್ ಆಚರಿಸಲಾಯಿತು ವಿಕ್ರಾಂತ್ ಟೈರ್ಸ್ ಕಾರ್ಖಾನೆ ಕಾರ್ಮಿಕರು ಮೊದಲ್ಗೊಂಡು ಇತರ ಹಲವಾರು ಕಾರ್ಖಾನೆಯ ಕಾರ್ಮಿಕರು ಮುಷ್ಕರ ನಡೆಸಿದರು. ಮಧ್ಯಾಹ್ನ 3 ಘಂಟೆಗೆ, ಸಿಪಿಐ (ಎಂ) ಜನತಾ, ಬಿ.ಜೆ.ಪಿ. ಕಾಂಗ್ರೆಸ್ ಎಸ್., ಡಿ.ವೈ.ಎಫ್.ಐ., ಎಸ್.ಎಫ್.ಐ.. ಮುಂತಾದ ಸಂಸ್ಥೆಗಳವರು ಭಾಗವಹಿಸಿದ್ದ ಬೃಹತ್ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಿ ಸಂಜೆ 6 ಗಂಟೆಗೆ ಬಹಿರಂಗ ಸಭೆ ನಡೆಯಿತು.

ಚಿಕ್ಕಬಳ್ಳಾಪುರ

ತಾರೀಖು 20—8—84 ಸೋಮವಾರ ಚಿಕ್ಕಬಳ್ಳಾಪುರದ ತಾಲೂಕು ಕಾಂಗ್ರೆಯೇತರ ಪಕ್ಷಗಳು ಮತ್ತು ಎನ್. ಟಿ. ಆರ್. ಬೆಂಬಲಿಗರು ಜಿಲ್ಲಾ ಬಂದ್ ಆಚರಿಸಿದರು. ಮೆರವಣಿಗೆಯ ನಂತರ ಸಾಯಂಕಾಲ 5 ಗಂಟೆಗೆ ಬಹಿರಂಗ ಸಭೆ ಶಾಸಕರಾದ ಎ. ಮುನಿಯಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು.

ವಕೀಲ ಸಂಘದ ಅಧ್ಯಕ್ಷ ಸೂರ್ಯನಾರಾಯಣ್ ರಾವ್, ವೆಂಕಟಕೃಷ್ಣಪ್ಪ ಕೆ. ಬಿ. ಪಿಳ್ಳಪ್ಪ, ಸಿ. ಪಿ. ಐ.(ಎಂ) ಮುಖಂಡ ಎಸ್. ಲಕ್ಷ್ಮಯ್ಯ ನವರು ಭಾಷಣವನ್ನು ಮಾಡುತ್ತಾ ಇಂದಿರಾ ಗಾಂಧಿ ಪ್ರಜಾಪ್ರಭುತ್ವದ ಕೊಲೆ ಮಾಡಿದ್ದಾರೆಂದು ತಿಳಿಸುತ್ತಿದ್ದಂತೆಯೇ ಪೋಲೀಸರು ಯಾರೋ ಕಿಳಗೇಡಿಗಳು ಕಲ್ಲುಗಳು ತೂರಿದ್ದಾರೆಂಬ ಆರೋಪದ ಮೇಲೆ ನಿಶಬ್ದವಾಗಿ ಆಲಿಸುತ್ತಿದ್ದ 4 ಸಾವಿರ ಸಭೀಕರ ಕಡೆ ನುಗ್ಗಿ ಲಾಠಿ ಚಾರ್ಜ್ ಮಾಡುತ್ತಾ, ನಿರಪರಾಧಿ ಜನಗಳನ್ನು ಹೊಡೆದು ಕೊಂಡು ಎತ್ತರದಲ್ಲಿದ್ದ ಭಾಷಣ ಮಾಡುತ್ತಿದ್ದ ಡಯಾಸ್ ಮೇಲೆ ಬಂದೂ ಸಹ ಹೊಡೆದು ಮುನ್ಸಿಪಲ್ ಆಫೀಸಿನೊಳಕ್ಕೆ ನುಗ್ಗಿ ಮುಗ್ಧ ಜನರನ್ನು ಹೊಡೆದರು. ಇದೆಲ್ಲಾ ಇಲ್ಲಿನ ಶಾಸಕರು, ಮತ್ತು ಎಲ್ಲಾ ವಿರೋಧ ಪಕ್ಷಗಳ ನಾಯಕರ ಮುಂದೆ ನಡೆದಂತಹ ಪೋಲೀಸ್ ದೌರ್ಜನ್ಯ. ಕೊನೆಗೂ ಜನ ಚೆಲ್ಲಾಪಿಲ್ಲಿಯಾಗಿ ಹೋದ ಮೇಲೆ ಊರಿನಲ್ಲಿ ರಾತ್ರಿ 7 ಘಂಟೆ ಮೇಲೆ ಸಂದಿ ಗೊಂದಿಗಳಿಗೆ ಹೋಗಿ ಮನೆಯಲ್ಲಿದ್ದ ಮುಗ್ಧ ಜನರನ್ನು ಹೊಡೆದಿದ್ದಾರೆ. ಕೆಲವರಿಗೆ ತಲೆ, ಕಾಲು, ಕೈ ಮೂಳೆಗಳು ಮುರಿದಿವೆ. ಸಿಪಿಐ(ಎಂ)ಕಾರ್ಯಕರ್ತರಾದ ಕಾ. ಕಣ್ಣಪ್ಪನವರಿಗೂ ಎಡ ಕೈ ಮುರಿದು ಹೋಗಿದೆ. ಜನತಾ ಸರ್ಕಾರದ ಪೋಲೀಸರ ಈ ವರ್ತನೆ ಖಂಡನೀಯ ●

ಬೀಡಿ ಕೆಲಸಗಾರರ ಸಭೆ

ಗುರುಪುರ—ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನಿನ ವಾರ್ಷಿಕ ಮಹಾಸಭೆಯು ತಾ॥ 12-8-84 ರಂದು ಮಳಲಿ ಶಾಲೆಯಲ್ಲಿ ಕಾ। ಶಂಕರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಎಂ. ಹೊನ್ನಯ್ಯರವರು ಹಿಂದಿನ ವರ್ಷದ ಕಾರ್ಯ ಚಟುವಟಿಕೆಯ ವರದಿಯನ್ನು ಮತ್ತು ಲೆಕ್ಕ ಪತ್ರವನ್ನು ಸಭೆಯ ಮುಂದಿಟ್ಟರು. ಸಭೆಯು ವರದಿ ಹಾಗು ಲೆಕ್ಕ ಪತ್ರವನ್ನು ಸರ್ವಾನು ಮತದಿಂದ ಅಂಗೀಕರಿಸಿತು.

ದ.ಕ. ಜಿಲ್ಲಾ ಬೀಡಿ ಫೇಡರೇಶನಿನ ಕಾರ್ಯದರ್ಶಿ ಯು. ಬಿ. ಲೋಕಯ್ಯನವರು ಮಾತನಾಡುತ್ತಾ, ಬೀಡಿ ಕಾರ್ಮಿಕರು. ತಮಗೆ ಬಂದ ಸೌಲಭ್ಯಗಳನ್ನು ರಕ್ಷಿಸಲು ಮತ್ತು ಇನ್ನು ಹೆಚ್ಚಿನ ಸೌಲಭ್ಯಗಳನ್ನು ಪಡೆಯಲು ಸಂಘಟನೆಯನ್ನು ಬಲಪಡಿಸಬೇಕೆಂದು ಕರೆ ನೀಡಿದರು. ಸಭೆಯಲ್ಲಿ ಕೆ. ಗಂಗಯ್ಯ ಮತ್ತು ವಾಸುದೇವ ಆಚಾರಿ ಬೀಡಿ ಕಾರ್ಮಿಕರ ಸಂಘಟನೆಯ ಬಗ್ಗೆ ಮಾತನಾಡಿದರು. ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಶಂಕರ ಶೆಟ್ಟಿ., ಕಾರ್ಯದರ್ಶಿ ಯಂ. ಹೊನ್ನಯ್ಯ, ಉಪಾಧ್ಯಕ್ಷ ಯಂ. ನೋಣಯ್ಯ, ಜೊತೆ ಕಾರ್ಯದರ್ಶಿಯಾಗಿ ಗೌರಿ, ಹಾಗೂ, ಕೋಶಾಧಿಕಾರಿ ಹರಿಶ್ಚಂದ್ರರವರನ್ನು ಒಳಗೊಂಡ ಹತ್ತೊಂಬತ್ತು ಮಂದಿಯ ಕಾರ್ಯ ಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ★

ವಿಯಟ್ನಾಂನ ಜನತೆಗೆ ಶುಭಾಶಯಗಳು

1945 ರ ಸೆಪ್ಟೆಂಬರ್ 2 ರಂದು ಸ್ಥಾಪಿಸಲಾದ ವಿಯೆಟ್ನಾಂ ಪ್ರಜಾಪ್ರಭುತ್ವವಾದೀ ಗಣರಾಜ್ಯದ 39 ನೇ ವಾರ್ಷಿಕೋತ್ಸವವನ್ನು ವಿಯೆಟ್ನಾಂನ ಜನತೆ ಸಂಭ್ರಮದಿಂದ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಅಲ್ಲಿನ ಜನತೆಗೂ, ಕಮ್ಯೂನಿಸ್ಟ್ ಪಕ್ಷಕ್ಕೂ ತನ್ನ ಕ್ರಾಂತಿಕಾರೀ ಶುಭಾಶಯಗಳನ್ನು ಅರ್ಪಿಸಿದೆ.

ವಿಯೆಟ್ನಾಂನ ಸ್ವಾತಂತ್ರ್ಯ ಪ್ರೇಮಿ ಜನತೆ ವರ್ಕರ್ಸ್ ಪಾರ್ಟಿಯ (ಈಗ ಕಮ್ಯೂನಿಸ್ಟ್ ಪಕ್ಷ) ಹಾಗೂ ತನ್ನ ಅತ್ಯಂತ ಪ್ರೀತಿ ಪಾತ್ರ ನಾಯಕ ಹೋಚಿಮಿನ್ ಅವರ ನೇತೃತ್ವದಲ್ಲಿ ಜಪಾನೀ ಮಿಲಿಟರಿ ಆಡಳಿತಗಾರರಿಂದ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿಗಳಿಂದ ಅಲ್ಲದೆ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಂದ ತಮ್ಮ ದೇಶವನ್ನು ಸಂಪೂರ್ಣವಾಗಿ ವಿಮುಕ್ತಿಗೊಳಿಸಲು 30 ವರುಷಗಳಷ್ಟು ದೀರ್ಘ ಕಾಲ ಧೀರ ಹೋರಾಟವನ್ನು ನಡೆಸಿದರು. ಬಲಿಷ್ಠ ಸಾಮ್ರಾಜ್ಯಶಾಹಿಗಳಿಗೆದುರಾಗಿ ವಿಯೆಟ್ನಾಮೀ ಜನತೆ ತೋರಿಸಿದ ಧೀರೋದಾತ್ತ ಸಮರಶೀಲ ಗುಣ, ಅವರು ಪ್ರದರ್ಶಿಸಿದ ಸರಿಸಾಟಿಯಿಲ್ಲದ ತ್ಯಾಗ ಬಲಿದಾನಗಳು ಜಗತ್ತಿನಾದ್ಯಂತ ಇರುವ ಸ್ವಾತಂತ್ರ್ಯ ಪ್ರೇಮಿ ಜನರೆಲ್ಲರ ಪ್ರೀತ್ಯಾದರಗಳನ್ನು, ಹೃತ್ಪೂರ್ವಕ ಬೆಂಬಲವನ್ನು ತನ್ನತ್ತ ಸೆಳೆದುಕೊಂಡವು.

ಸಾಮ್ರಾಜ್ಯವಾದೀ ಆಕ್ರಮಣಕಾರರಿಂದ ತತ್ತರಿಸಿಹೋಗಿ ವಿನಾಶಗೊಂಡಿದ್ದ ವಿಯೆತ್ನಾಂ ನಂತರ ಇವುಗಳನ್ನು ಸರಿಪಡಿಸಿ ಸಮಾಜವಾದವನ್ನು ಕಟ್ಟಿದ್ದು ಒಂದು ಮಹಾನ್ ಸಾಹಸಗಾಥೆ. ಈಗ ವಿಯೆತ್ನಾಂ ಕಳೆದ 3 ವರ್ಷಗಳಲ್ಲಿ ತನ್ನ ಆರ್ಥಿಕ ವ್ಯವಸ್ಥೆಯನ್ನು ತೀವ್ರವಾಗಿ ಅಭಿವೃದ್ಧಿಗೊಳಿಸಿದೆ. ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಯಲ್ಲಿ ಅತಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ.

ಆಗ್ನೇಯ ಏಷ್ಯಾದ ಶಾಂತಿ ಮತ್ತು ಭದ್ರತೆಗೆ ಸಂಬಂಧಿಸಿದಂತೆ ಮತ್ತು ಆ ಪ್ರದೇಶದ ದೇಶಗಳ ನಡುವೆ ಶಾಂತಿಯುತ ಸಹಬಾಳ್ವೆಯ ಸಂಬಂಧಗಳನ್ನು ರೂಪಿಸಲು ವಿಯೆಟ್ನಾಂ ಲಾವೋಸ್ ಮತ್ತು ಕಂಪೂಚಿಯಾದೊಡಗೂಡಿ ರಚನಾತ್ಮಕ ಸಲಹೆಗಳನ್ನು ಮುಂದಿಡುತ್ತಿದೆ.

ಸಿ. ಪಿ. ಐ. (ಎಂ) ಪಕ್ಷವು ವಿಯೆಟ್ನಾಂ ಜನತೆಗೆ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತಾ ಬಂದಿದೆ ಮತ್ತು ಮುಂದೆಯೂ ಅದನ್ನು ಮುಂದುವರಿಸುತ್ತದೆ. ಭಾರತದ ಮತ್ತು ವಿಯೆತ್ನಾಂ ಜನತೆಯ ಸ್ನೇಹ ನಿಕಟವಾಗಿದೆ ಮತ್ತು ಮುಂದೆ ಅದು ಇನ್ನೂ ಬಲಗೊಳ್ಳುತ್ತದೆ. ಕಮ್ಯೂನಿಸ್ಟ್ ಪಾರ್ಟಿ ಆಫ್ ವಿಯೆತ್ನಾಂ ಮತ್ತು ಸಿ. ಪಿ. ಐ. (ಎಂ) ನಡುವಿನ ಸೌಹಾರ್ದ ಸಂಬಂಧಗಳು ಸಹ ಬಲಗೊಳ್ಳುತ್ತವೆ.

ಸಮಾಜವಾದವನ್ನು ಕಟ್ಟುವ ದಿಕ್ಕಿನಲ್ಲಿ ವಿಯೆತ್ನಾಂ ಜನತೆಗೆ ಮತ್ತಷ್ಟು ಯಶಸ್ಸು ಲಭಿಸಲೆಂದು ಸಿ.ಪಿ.ಐ (ಎಂ) ಹಾರೈಸುತ್ತದೆ.

ಬೆಂಗಳೂರು

ಇಂಜಿನಿಯರಿಂಗ್ ವಿದ್ಯಾರ್ಥಿಗಳ ಗೆಲುವು

ಬಿ. ಇ. ಪರೀಕ್ಷೆಗಳಲ್ಲಿನ ಎನ್. ಎಫ್. ಟಿ. ಇ. (ತಾಂತ್ರಿಕ ಶಿಕ್ಷಣಕ್ಕೆ ಅರ್ಹರಲ್ಲ) ಎಂಬ ನಿಯಮವನ್ನು ರದ್ದು ಮಾಡಬೇಕೆಂದು ಒತ್ತಾಯಿಸಿ ಬೆಂಗಳೂರಿನಲ್ಲಿ ವಿಧಾನ ಸೌಧದ ಮುಂದೆ ಎಸ್. ಎಫ್. ಐ. ನೇತೃತ್ವದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ದಿನಾಂಕ 20-8-84 ರಂದ ಅಮರಣಾಂತ ಉಪವಾಸಮುಷ್ಕರ ಪ್ರಾರಂಭಿಸಿದ್ದರು.

ಪ್ರಸ್ತುತ ಪರೀಕ್ಷಾ ನಿಯಮದ ಪ್ರಕಾರ ಬಿ. ಇ. ವಿದ್ಯಾರ್ಥಿಯೊಬ್ಬನು ಪ್ರಥಮ ವರ್ಷದ ಒಟ್ಟು 11 ವಿಷಯಗಳಲ್ಲಿ ಶೇ 50 ರಷ್ಟು ಅಂದರೆ 6 ವಿಷಯಗಳಲ್ಲಿ ಉತ್ತೀರ್ಣನಾದರೆ ಮಾತ್ರ ಮುಂದಿನ ತರಗತಿಗೆ ಬಡ್ತಿ ದೊರೆಯುವುದು. ಎರಡನೆಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿಯೂ ಸಹ ಶೇ 50 ರಷ್ಟು ವಿಷಯಗಳಲ್ಲಿ ಉತ್ತೀರ್ಣರಾಗುವ ಹಾಗೂ ಇದರೊಂದಿಗೆ ಪ್ರಥಮ ವರ್ಷದಲ್ಲಿ ಬಾಕಿಯಿದ್ದ ವಿಷಯಗಳಲ್ಲೂ ಉತ್ತೀರ್ಣರಾದವರಿಗೆ ಮಾತ್ರ ಮೂರನೆಯ ವರ್ಷದ ತರಗತಿಗೆ ಬಡ್ತಿ ದೊರೆಯುವುದು. ಬಾಕಿಯಿದ್ದ ವಿಷಯಗಳನ್ನು 6 ಅವಕಾಶಗಳಲ್ಲಿ ಪಾಸು ಮಾಡದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು "ತಾಂತ್ರಿಕ ಶಿಕ್ಷಣಕ್ಕೆ ಅರ್ಹರಲ್ಲ" (ಎನ್. ಎಫ್. ಟಿ. ಇ.) ಎಂದು ಘೋಷಿಸಲಾಗುವುದು. ಎನ್. ಎಫ್. ಟಿ. ಇ. ಬಿರುದು ಪಡೆದ ವಿದ್ಯಾರ್ಥಿಗಳನ್ನು ಬಿ. ಇ. ಪದವಿ ಶಿಕ್ಷಣದಿಂದಲೇ ಸಂಪೂರ್ಣವಾಗಿ ಹೊರದೂಡಲಾಗುವುದು. ಈ ನಿಯಮದಿಂದಾಗಿ ನೂರಾರು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯವೇ ಬರಡಾಗುತ್ತದೆ. ಈ ವಿಶಿಷ್ಟ ಪರೀಕ್ಷಾ ನಿಯಮವು ಬೆಂಗಳೂರು ಹಾಗೂ ಗುಲ್ಬರ್ಗ ವಿಶ್ವ ವಿದ್ಯಾಲಯಗಳಲ್ಲಿ ಮಾತ್ರ ಜಾರಿಯಲ್ಲಿದೆ.

ಎನ್. ಎಫ್. ಟಿ. ಇ. ನಿಯಮವನ್ನು ರದ್ದು ಮಾಡುವಂತೆ ಒತ್ತಾಯಿಸಿ ಬೆಂಗಳೂರು ವಿ.ವಿ. ವ್ಯಾಪ್ತಿಯ ವಿವಿಧ ಇಂಜಿನಿಯರಿಂಗ್ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಅಗಸ್ಟ್ 10 ರಂದು ಮೆರವಣಿಗೆ ನಡೆಸಿ ಉಪಕುಲಪತಿಗಳಿಗೆ, ಸಚಿವರಿಗೆ ಮತ್ತು ರಾಜ್ಯ ಪಾಲರ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಸಿದರು. ನಂತರ ಶಿಕ್ಷಣ ಮಂತ್ರಿಗಳಿಗೂ ಪರೀಕ್ಷಾನಿಯಂತ್ರಣಾಧಿಕಾರಿಯವರಿಗೂ ಸಮಸ್ಯೆ ಬಗ್ಗೆ ವಿವರಿಸಲಾಯಿತು. 14-8-84 ರಂದ ವಿಧಾನಸೌಧದ ಮುಂದೆ ಸರದಿ ಉಪವಾಸ ಮುಷ್ಕರ ಪ್ರಾರಂಭಿಸಲಾಯಿತು. ಮುಖ್ಯ ಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗ್ಡೆಯವರು ಹಾಗೂ ಕಾನೂನು ಸಚಿವರಾದ ಶ್ರೀ ಲಕ್ಷ್ಮೀ ಸಾಗರ್‌ರವರು ಸತ್ಯಾಗ್ರಹ ಶಿಬಿರಕ್ಕೆ ಭೇಟಿನೀಡಿದ್ದರು. ಅಗಸ್ಟ್ 21 ರಂದು ಪರೀಕ್ಷಾನಿಯಂತ್ರಣಾಧಿಕಾರಿಯವರೂ ಭೇಟಿ ನೀಡಿ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸುವುದಾಗಿ ಭರವಸೆ ನೀಡಿದರು. 25 ನೇ ತಾರೀಖು ಬೆಂಗಳೂರು ವಿ. ವಿ. ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಈ ನಿಯಮದ ರದ್ದತಿ ಬಗ್ಗೆ ಚರ್ಚೆ ನಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು 8 ಅವಕಾಶಗಳನ್ನು ನೀಡಲು ತೀರ್ಮಾನ ಮಾಡಲಾಗಿದೆ. ಇದು ಹೋರಾಟಕ್ಕೆ ಲಭಿಸಿರುವ ಜಯವಾಗಿದೆ.

ಇಂಜಿನಿಯರಿಂಗ್ ವಿದ್ಯಾರ್ಥಿಗಳ ಈ ಹೋರಾಟಕ್ಕೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ರಾಜ್ಯ ಸಮಿತಿಯು ನೇತೃತ್ವ ನೀಡಿತ್ತು.

ಶ್ರದ್ಧಾಂಜಲಿ

ಬಡ ಕಾರ್ಮಿಕ ಕುಟುಂಬದಲ್ಲಿ ಜನಿಸಿ, ಬಡ ಜನರ ಹಾಗೂ ದೀನ ದಲಿತರ ಹೋರಾಟಗಳಲ್ಲಿ ಭಾಗವಹಿಸುತ್ತಾ ತನ್ನ ಜೀವಮಾನದುದ್ದಕ್ಕೂ ಕಾರ್ಮಿಕ ವರ್ಗದ ರಾಜಕೀಯದಲ್ಲಿದ್ದುಕೊಂಡು, ತನ್ನಿಂದಾದಷ್ಟು ಕೆಲಸ ಕಾರ್ಯಗಳನ್ನು ನಡೆಸಿ ಕೊಂಡು ಬಂದಿದ್ದ ಬಂಟ್ವಾಳ ತಾಲೂಕು ನರಿಕೊಂಬು ಗ್ರಾಮದ ಕಾಮ್ರೇಡ್ ಬೊಂಬಯ ಸುಂದರರವರು ದುರದೃಷ್ಟವಶಾತ್ ಹಾವು ಕಡಿತದಿಂದ ತಾ. 20-8-84 ರಂದು ನಿಧಾನರಾಗಿರುತ್ತಾರೆ.

ಕಾಮ್ರೇಡ್ ಸುಂದರರವರು 1949 ರಲ್ಲಿ ಪಾಣೆ ಮಂಗಳೂರು ಮತ್ತು ಆಸು ಪಾಸಿನ ಕೆಲವು ಗ್ರಾಮಗಳಲ್ಲಿ ರೈತ ಕಾರ್ಮಿಕರ ಚಳುವಳಿಯ ಮುಖಂಡರಾಗಿದ್ದರು. 1958 ರಲ್ಲಿ ನರಿಕೊಂಬು ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಸ್ಪರ್ಧಿಸಿ ಬಹುಮತಗಳಿಸುವುದರೊಂದಿಗೆ ಬಂಟ್ವಾಳ ತಾಲೂಕಿನಲ್ಲಿಯೇ ಕಮ್ಯುನಿಸ್ಟ್ ಪಕ್ಷದ ಪ್ರಪ್ರಥಮ ಪಂಚಾಯತ್ ಅಧ್ಯಕ್ಷರಾಗಿದ್ದರು. ಪಕ್ಷ ವಿಭಜನೆಯ ಬಳಿಕ ಕಾಮ್ರೇಡ್ ಸುಂದರರವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಕಾಮ್ರೇಡ್ ಸುಂದರರವರು ಬಂಟ್ವಾಳ ತಾಲೂಕಿನ ರೈತ ಕಾರ್ಮಿಕರ ಚಳುವಳಿಯಲ್ಲಿ ಕೊನೆ ತನಕವೂ ಭಾಗವಹಿಸುತ್ತಿದ್ದರು.

ಮಾರ್ಕ್ಸ್‌ವಾದ ಮತ್ತು ರಾಷ್ಟ್ರೀಯತೆಯ ಪ್ರಶ್ನೆ

(5ನೇ ಪುಟದಿಂದ)

ಕಾಣುತ್ತಿತ್ತು ; ಇದಕ್ಕೆ ವಿರುದ್ಧವಾದುದು ಏನಿದ್ದರೂ ಅದನ್ನು ರಾಷ್ಟ್ರವಿರೋಧಿ ಮತ್ತು ಐಕ್ಯತಾ – ವಿರೋಧಿ ಎಂದು ಖಂಡಿಸಿ ಬಿಡುತ್ತಿತ್ತು. ಬಹಳ ದಿನಗಳವರೆಗೆ ಈ ರೀತಿ ನಡೆಯುವುದು ಸಾಧ್ಯವಾಯಿತು, ವಿಶೇಷವಾಗಿ ಸ್ವಾಧೀನತಾ ಹೋರಾಟದ ಅವಧಿಯಲ್ಲಿ ಯಾಕೆಂದರೆ ಆಗ ಜನತೆ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಎದುರಿಸುತ್ತಿತ್ತು, ಪ್ರತಿಯೊಬ್ಬನೂ ದಮನ ನಡೆಸುತ್ತಿದ್ದ ಸಾಮ್ರಾಜ್ಯಶಾಹಿ ಹಾಗೂ ದಮನಕ್ಕೊಳಗಾಗಿದ್ದ ಜನತೆಯ ನಡುವೆ ವೈರುಧ್ಯ ಪ್ರಬಲವಾಗಿದ್ದನ್ನು ಕಾಣುತ್ತಿದ್ದ. ಸ್ವಾಭಾವಿಕವಾಗಿಯೇ ಅದು ಒಂದು ರಾಷ್ಟ್ರ, ಒಂದು ಜನತೆಯೆಂಬ ಭಾವನೆಯಲ್ಲಿ ವ್ಯಕ್ತಗೊಂಡಿತು. ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಭಾರತೀಯರು ಒಂದು ರಾಷ್ಟ್ರವಲ್ಲ. ಹಲವು ಜನಸಮೂಹಗಳ ಮೊತ್ತವಷ್ಟೆ ಎಂದು ಬೇರೆ ಹೇಳುತ್ತಿದ್ದುದರಿಂದ ಅದು ಇನ್ನಷ್ಟು ಸ್ಪಷ್ಟವಾಗಿ ಅಭಿವ್ಯಕ್ತಗೊಳ್ಳುವಂತಾಗಿತ್ತು.

ಹೊಂದಾಣಿಕೆ ಪರಿಹಾರವಲ್ಲ

ಆದರೆ ಅದೇ ವೇಳೆಗೆ ಜನತೆಯ ನಿಜವಾದ ಏಕೀಕರಣದಲ್ಲಿ ಸಮಸ್ಯೆಗಳಿದ್ದವು. ಬೂರ್ಜ್ವಾ ಸಮಾನತೆ ಮತ್ತು ರಾಷ್ಟ್ರೀಯ ಐಕ್ಯತೆಯ ಭಾವನೆ ಪ್ರತಿ ಹೆಜ್ಜೆಯಲ್ಲೂ ಜಾತಿವಾದ, ಕೋಮುವಾದ ಹಾಗೂ ಇತರ ಎಲ್ಲಾ ಊಳಿಗಮಾನ್ಯ ಮತ್ತು ಅರೆ ಊಳಿಗಮಾನ್ಯ ಸಂಸ್ಥೆಗಳು, ತತ್ತ್ವವಿಚಾರಗಳ ವಿರುದ್ಧ ಹೋರಾಡಬೇಕಾಗಿತ್ತು. ರಾಷ್ಟ್ರೀಯ ಹೋರಾಟದ ಬೂರ್ಜ್ವಾ ಮುಖಂಡರು ಸ್ವತಃ ಊಳಿಗಮಾನ್ಯ ಸಂಸ್ಥೆಗಳ ಬಗ್ಗೆ ರಾಜೀ ಭಾವ ತಳೆದ ಅಪರಾಧಿಗಳಾಗಿದ್ದರು. ಜತೆಗೇ ಜಾತಿ – ವಿರೋಧೀ ಆಂದೋಲನಗಳು ಮತ್ತು ಅಸ್ಪೃಶ್ಯರ ಸಮಾನತೆಯ ಬೇಡಿಕೆಗಳು ಅವರನ್ನು ಜರಿಯುತ್ತಿದ್ದವು. ಆದರೂ ಅವರು ಈ ಕೆಲವು ಬೇಡಿಕೆಗಳ ಪರವಾಗಿ ಉದಾರವಾಗಿ ವಾದಿಸಿ, ಸಾಮ್ರಾಜ್ಯಶಾಹಿಯೆದುರು ತಕ್ಷಣದ ಐಕ್ಯತೆ ಅಗತ್ಯಗಳಿಗೆ ತಮ್ಮ ಸಂಪ್ರದಾಯ ನಿಷ್ಠ ಮನೋಭಾವವನ್ನು ಹೊಂದಿಸಿಕೊಂಡರು. ಹಿಂದೂ-ಮುಸ್ಲಿಂ ಐಕ್ಯತೆ, ಅಸ್ಪೃಶ್ಯತೆಯ ನಿವಾರಣೆಯ ಅವರ ಪ್ರಯತ್ನಗಳೆಲ್ಲಾ ಉದಾರವಾದಿ ಹೊಂದಾಣಿಕೆಗಳಾಗಿದ್ದವೇ ಹೊರತು ಅವು ಸಮಸ್ಯೆಯನ್ನು ಪರಿಹರಿಸಲಿಲ್ಲ. ಈ ಹಿಂದಿನಂತೆ ಈಗಲೂ ಜಾತಿ ಮತ್ತು ಮತ ತಮ್ಮ ವಿಚ್ಛಿದ್ರಕಾರೀ ಪಾತ್ರ ವಹಿಸುತ್ತಲೇ ಇವೆ.

(ಮುಂದುವರಿಯುವುದು)

ಮೃತರ ಅಕಾಲಿಕ ದುರ್ಮರಣವು ತಾಲೂಕು ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಕ್ಷಕ್ಕೆ ತುಂಬಲಾರದ ನಷ್ಟವಾಗಿರುತ್ತದೆ ಎಂಬುವುದಾಗಿ ತಾಲೂಕು ಸಮಿತಿಯು ಅಭಿಪ್ರಾಯಪಟ್ಟು ಮೃತರ ಕುಟುಂಬದ ಮತ್ತು ಸಾರ್ವಜನಿಕರ ದುಃಖದಲ್ಲಿ ಪಕ್ಷದ ತಾಲೂಕು ಸಮಿತಿಯು ಭಾಗಿಯಾಗುತ್ತದೆ ಎಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.

ಪೂಜಾರಿಯವರು ನೀಡಿದ ಭರವಸೆ ಎಲ್ಲಿ ?

ಉಳ್ಳಾಲ ರೈಲ್ವೇ ಸೇತುವೆಯಿಂದ ದಿನ ನಿತ್ಯ ಸಾವಿರಾರು ಮಂದಿ ಹೋಗಿ ಬರುವ ಸಾರ್ವಜನಿಕ ದಾರಿಯೊಂದು ಕಳೆದ 50 ವರುಷಗಳಿಗಿಂತ ಮೊದಲಿನಿಂದಲೂ ಇತ್ತು. ಈ ಸೇತುವೆಯನ್ನು ದುರಸ್ತಿಗೊಳಿಸುವ ಕೆಲಸವು ಕಳೆದ 4-5 ವರುಷಗಳ ಹಿಂದೆ ಪ್ರಾರಂಭವಾಗಿ 1982 ರಲ್ಲಿ ಸಂಪೂರ್ಣಗೊಂಡಾಗ ಸಾರ್ವಜನಿಕರು ಹೋಗುವ ದಾರಿಯನ್ನು ತೆಗೆದು ಹಾಕಿರುತ್ತಾರೆ.

ಈ ದಾರಿಯನ್ನು ಹಿಂದಿನಂತೆಯೇ ಇಡಬೇಕೆಂದು ಸಾರ್ವಜನಿಕರು ಕೇಂದ್ರ ಸರಕಾರಕ್ಕೆ ಅನೇಕ ಬಾರಿ ಮನವಿ ಮಾಡಿದರು. 1982 ರಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದ ಸದಸ್ಯರಾದ ಕೇಂದ್ರ ಸರಕಾರದ ವಿತ್ತ ಸಹಾಯ ಸಚಿವರಾದ ಜನಾರ್ಧನ ಪೂಜಾರಿಯವರಿಗೆ ಉಳ್ಳಾಲದ ಮತ್ತು ಈ ಸೇತುವೆಯ ದಾರಿ ಮೂಲಕ ಹೋಗುವ ನಾಗರಿಕರ ಪರವಾಗಿ ಮನವಿಯೊಂದನ್ನು ಕೊಡಲಾಗಿತ್ತು.

ಜನಾರ್ಧನ ಪೂಜಾರಿಯವರು ಖುದ್ದಾಗಿ ಈ ಸೇತುವೆಯ ದಾರಿಯನ್ನು ಪರಿಶೀಲನೆ ನಡೆಸಿ ಈ "ಸೇತುವೆಯಲ್ಲಿದ್ದ ಸಾರ್ವಜನಿಕ ಕಾಲು ದಾರಿಯನ್ನು ಕೂಡಲೇ ರಚಿಸಲಾಗುವುದು" ಎಂದು ಹೇಳಿದ್ದರು.

ಇದೀಗ ಮೂರು ವರುಷಗಳಾಗುತ್ತ ಬಂದರೂ ಸಚಿವ ಪೂಜಾರಿಯವರ ಭರವಸೆ ಕಾರ್ಯಗತವಾಗಲಿಲ್ಲ. ಸಚಿವರು ಮುಂದಿನ ಲೋಕ ಸಭಾ ಚುನಾವಣೆಯ ಮೊದಲಾದರೂ ತಮ್ಮ ಭರವಸೆಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುವುದು ಅಗತ್ಯವಲ್ಲವೆ ?

(8ನೇ ಪುಟ ನೋಡಿ)

ಜನತೆಯ ಐಕ್ಯ ಹೋರಾಟದ ಅದ್ಭುತ ವಿಜಯ

(1ನೇ ಪುಟದಿಂದ)

ದಿಂದಲೇ ಹದ್ದು ಪಾರು ಮಾಡಬೇಕೆಂಬಷ್ಟೇ ಅಲ್ಲ, ರಾಮರಾವ್ ಅವರ "ಬಂಧನ"ದಲ್ಲಿರುವ ಶಾಸಕರ ಬಿಡುಗಡೆಯಾಗಿ ಅವರೆಲ್ಲ ಪಾಯಾಗಿ ಓಡಾಡುವ ತನಕ, ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಶಾಸನಸಭೆ ಕರೆಯುವುದು ಆರೋಗ್ಯಕರವಲ್ಲ ಎಂದು ಒತ್ತಾಯಿಸುವ ಮನವಿಯನ್ನು ಕಾಂಗ್ರೆಯ ಲೋಕಸಭೆ-ಶಾಸನಸಭೆ ಸದಸ್ಯರು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಶಾಸಕರೂ ಅಂಥದ್ದೇ ಹಾಡು ಹಾಡಿದ್ದಾರೆ. ಮತ್ತೊಂದು ಅಪಾಯಕಾರಿ ಸುದ್ದಿಯೂ ಬೇಕು ಕಂಡಿದೆ. ತನ್ನ ತಪ್ಪಿಗಾಗಿ ಜನತೆಯಿಂದ ಮುಖಭಂಗಕ್ಕೀಡಾದ ಇಂದಿರಾಗಾಂಧಿ ಇನ್ನೊಂದು ತಪ್ಪು ಹೆಜ್ಜೆಯತ್ತ ಧಾವಿಸುತ್ತಿದ್ದಾರೆಂತೆ. ಸೆಪ್ಟೆಂಬರ್ 7 ರಂದು ಕಾಂಗ್ರೆಸ್ ಶಾಸಕರ ಸಭೆ ಸೇರಿದ್ದು, ಭಾಸ್ಕರರಾವ್ ಸಂಪುಟಕ್ಕೆ ಈಗಾಗಲೇ ತಾವಿತ್ತ ಬೆಂಬಲವನ್ನು ಬಿಟ್ಟುಕೊಟ್ಟು ಎನ್. ಟಿ. ರಾಮರಾವ್ ಸರಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಾರದಂತೆ ಮಾಡುವ, ರಾಷ್ಟ್ರಾಧ್ಯಕ್ಷರ ಆಡಳಿತ ಹೇರುವ ಒಳಸಂಚು ನಡೆದಿದೆಯಂತೆ. ಭಾಸ್ಕರರಾವ್ ಸಂಪುಟಕ್ಕೆ ತಮ್ಮ ಬೆಂಬಲ ವಾಪಸ್ ಆದರೆ ಭಾಸ್ಕರರಾವ್ ರಾಜೀನಾಮೆ ನೀಡುತ್ತಾರೆ. ಕೂಡಲೇ ರಾಷ್ಟ್ರಾಧ್ಯಕ್ಷರ ಆಡಳಿತ ಜಾರಿ. ಎನ್.ಟಿ ಆರ್. ಅಧಿಕಾರಕ್ಕೆ ಬಂದರೆ ತನಗಾಗುವ ಎರಡನೇ ಸೋಲನ್ನು ತಪ್ಪಿಸಲು ಈ ಹಂಚಿಕೆ ನಡೆದು ಬಹುದೆಂಬ ದಟ್ಟ ವಾರ್ತೆಯಿದೆ. ಹಾಗಾದಲ್ಲಿ ಇಂದಿರಾಗಾಂಧಿ ಇನ್ನೂ ಹೆಚ್ಚಿನ ವಿರೋಧ ಎದುರಿಸಬೇಕಾದೀತೆಂಬ ಎಚ್ಚರಿಕೆಯನ್ನು ಆ-ಧ್ರದ ಕೆಲವು ಮುಖಂಡರು ನೀಡಿದ್ದಾರೆ. ಎಲ್ಲ ವಿರೋಧ ಪಕ್ಷಗಳೂ ಆ ಅಭಿಪ್ರಾಯವನ್ನು ಬೆಂಬಲಿಸಿವೆ.

ತಾನು, ತನ್ನ ಮಗ, ತನ್ನ ವೊಮ್ಮಗ ಅಜರಾಮರರಾಗಿ ರಾಜ್ಯವಾಳಬೇಕೆಂಬ ಅಭಿಲಾಷೆ ಹೊಂದಿದ ಇಂದಿರಾಗಾಂಧಿ ಎಷ್ಟು ಕೆಳಮಟ್ಟದ ರಾಜಕಾರಣಕ್ಕೂ ಕೈ ಹಾಕಲು ತಯಾರಿದ್ದಾಳೆ. ಎಂಥ ಕುಯುಕ್ತಿಗೂ ಸಿದ್ಧಳಿದ್ದಾಳೆಂಬುದನ್ನು ಇದು ತೋರಿಸಿಕೊಡುತ್ತದೆ. ಆದರೆ ಭಾರತ ದೇಶದ ಜಾಗೃತ ಜನತೆ ಅದನ್ನು ಒಪ್ಪುವುದಿಲ್ಲ. ವಿರೋಧಿಸುತ್ತದಷ್ಟೇ ಅಲ್ಲ ಅದನ್ನು ಸಂಪೂರ್ಣ ನಾಶ ಮಾಡುತ್ತದೆ. ಆ ಹೋರಾಟದ ಮುಖಂಡತ್ವವನ್ನು ಸಿಪಿಐ (ಎಂ), ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ವಹಿಸಿಕೊಳ್ಳುತ್ತವೆ. ಜನತೆಯ ಹೋರಾಟ ಮುಂದುವರಿಯಲಿ, ಸರ್ವಾಧಿಕಾರ ಶಕ್ತಿ ನಾಶವಾಗಲಿ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಳ್ಳಲಿ. ●

ರಾಜ್ಯ ಸರಕಾರಿ ನೌಕರರ ಮುಷ್ಕರ

ರಾಜ್ಯ ಸರ್ಕಾರಿ ನೌಕರರ ಅಖಿಲ ಭಾರತ ಫೆಡರೇಷನ್ನಿನ ಕರೆಯ ಮೇರೆಗೆ ತಮ್ಮ ಏಳು ಬೇಡಿಕೆಗಳ ಸಲುವಾಗಿ ಕರ್ನಾಟಕ ರಾಜ್ಯದ ನೌಕರದಾರರು ಮುಷ್ಕರವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಅಭಿನಂದಿಸುತ್ತದೆ.

ಅಖಿಲ ಭಾರತ ಮಟ್ಟದ ಮುಷ್ಕರ ನಡೆದಾಗ ಕರ್ನಾಟಕದ ಜನತಾ ಸರಕಾರ ವಿಚಾರರಹಿತ ಕ್ರಮಗಳ ಮೂಲಕ ನೌಕರದಾರರಲ್ಲಿ ಒಡಕುಂಟುಮಾಡಿ ಮುಷ್ಕರವನ್ನು ವಿಫಲಗೊಳಿಸುವ, ಅದನ್ನು ವಿರೋಧಿಸುವ ನೀತಿಯನ್ನು ಜನತಾ ಸರ್ಕಾರ ಮತ್ತು ಜನತಾ ಪಕ್ಷ ಅನುಸರಿಸಿರುವುದು ಸರಿಯಲ್ಲವೆಂದೂ ಸಿ. ಪಿ. ಐ. (ಎಂ) ಹೇಳಬಯಸುತ್ತದೆ.

ಹೆಗಡೆ ಸರ್ಕಾರ ಮುಷ್ಕರದಲ್ಲಿದ್ದ ನೌಕರರ ಮುಖಂಡರ ಮೇಲೆ ಲಾಠಿ ಚಾರ್ಜ್ ಮಾಡಿ, ನೂರಾರು ಮಂದಿಯನ್ನು ಬಂಧಿಸಿ ಜೈಲಿಗೆ ಹಾಕಿರುವುದನ್ನು ಪಾರ್ಟಿ ಖಂಡಿಸುತ್ತದೆ. ರಾಜ್ಯ ನೌಕರದಾರರ ಪ್ರತಿನಿಧಿಗಳ ಜೊತೆಯಲ್ಲಿ ಅವರ ಸಮಸ್ಯೆಗಳ ಕುರಿತು ಚರ್ಚೆ ನಡೆಸಬೇಕೆಂದೂ ಹೆಗಡೆಯವರನ್ನು ವಿನಂತಿಸುತ್ತದೆ.

ರಾಜ್ಯ ಸರ್ಕಾರಿ ನೌಕರದಾರರಲ್ಲಿ ಹಲವಾರು ಸಂಘಟನೆಗಳು ತಲೆಎತ್ತಿದ್ದು ಅಖಿಲ ಭಾರತ ಮಟ್ಟದ ಮುಷ್ಕರ ನಡೆದಿರುವಾಗ ಎಲ್ಲ ಸಂಘಟನೆಗಳ ಜೊತೆಯಲ್ಲಿ ಸಂಪರ್ಕ ಬೆಳೆಸಿ, ಅವರ ಸಹಕಾರವನ್ನು ಪಡೆಯುವುದರಲ್ಲಿ ನೌಕರದಾರರ ಸಂಘಟನೆಯ ಮುಖಂಡತ್ವ ವಿಫಲಗೊಂಡಿರುವುದರಿಂದಲೇ ಹಾಗೆಯೇ ಈ ಮುಷ್ಕರದ ಮಹತ್ವವನ್ನು ಎಲ್ಲ ವಿಭಾಗದ ನೌಕರದಾರರಲ್ಲಿ ಪ್ರಚಾರಮಾಡಿ ಅದರ ಮಹತ್ವ ಮನದಟ್ಟು ಮಾಡುವುದರಲ್ಲಿ ಹಿಂಜರಿತ ಮಾಡಿದುದರಿಂದಲೇ ಬೆಂಗಳೂರಿನಂತ ನಗರದಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗದಿರಲು ಮುಖ್ಯ ಕಾರಣವೆಂಬುದನ್ನು ತಿಳಿದುಕೊಳ್ಳಬೇಕೆಂದು ಮನವರಿಕೆ ಮಾಡಿಕೊಡಲು ಇಚ್ಛಿಸುತ್ತದೆ.

ರಿಕ್ಷಾ ಚಾಲಕರ ಸಂಘದ 7 ನೇ ವಾರ್ಷಿಕ ಮಹಾ ಸಭೆ

ತಾ|| 21-8-84 ರಂದು ಕುಂದಾಪುರ ರಿಕ್ಷಾ ಚಾಲಕರ ಸಂಘ (ಸಿ ಐ. ಟಿ ಯು) ದ 7ನೇ ವಾರ್ಷಿಕ ಮಹಾಸಭೆಯು ಎಚ್. ಕರುಣಾಕರರವರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಾರಂಭದಲ್ಲಿ ಕಾರ್ಯದರ್ಶಿಯವರಾದ ಎನ್. ಉಮೇಶ್‌ರವರು ಗತ ವರ್ಷದ ಚಟುವಟಿಕೆ ಹಾಗೂ ಲೆಕ್ಕ ಪತ್ರದ ವರದಿಯನ್ನು ಮಂಡಿಸಿದರು.

ವರದಿಯ ಮೇಲೆ ಚರ್ಚೆಯಲ್ಲಿ ಕೆ ಗೋಪಾಲ, ಕಂದಾವರ ಗೋಪಾಲ ಮತ್ತು ಬಸವ ಕಂದಾವರ ಹಾಗೂ ಇತರರು ಭಾಗವಹಿಸಿದರು. ಕುಂದಾಪುರ ಕೆಲಸಗಾರರ ಸಂಘದ ಕಾರ್ಯದರ್ಶಿಯವರಾದ ವಿ. ಮಹಾಬಲರವರು ಶುಭ ಕೋರಿದರು.

ರಿಕ್ಷಾ ಅಪಘಾತದಲ್ಲಿ ನಷ್ಟವಾದುದರಲ್ಲಿ ಮೂರನೆಯ ಒಂದು ಅಂಶ ಪರಿಹಾರವಾಗಿ ರೂಪಾಯಿ ಒಂದು ಸಾವಿರವನ್ನು ಶ್ರೀ ಮೆಕ್ಸಿಮ್ ಡಿಮೆಲ್ಲೋ ಇವರಿಗೂ ಹಾಗೂ ಅಪಘಾತದಲ್ಲಿ ಜಖಂ ಆಗಿ ನೊಂದ ಶ್ರೀ ವೆಂಕಟೇಶನವರಿಗೆ ಸಭೆಯಲ್ಲಿ ಸಂಗ್ರಹ ಮಾಡಿದ ರೂಪಾಯಿ ಇನ್ನೂರ ಐವತ್ತನ್ನು ಪರಿಹಾರವಾಗಿ ಕೊಡಲಾಯಿತು.

ಏಳನೇ ತರಗತಿ ಪಾಸಾದವರಿಗೆ ಮಾತ್ರ ಡ್ರೈವಿಂಗ್ ಲೈಸನ್ಸ್ ನೀಡಲು ಇತ್ತೀಚೆಗೆ ರಾಜ್ಯ ಸರಕಾರ ನಿರ್ಧರಿಸಿರುವುದನ್ನು ಸಭೆಯಲ್ಲಿ ಖಂಡಿಸಿ ಈ ಕಾನೂನನ್ನು ರದ್ದುಪಡಿಸಲು ಒತ್ತಾಯಿಸಲಾಯಿತು. ಕಾರ್ಮಿಕ ಮುಖಂಡರಾದ ಕೆ. ಶಂಕರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಜನಸಾಮಾನ್ಯರ ಮಧ್ಯೆ ಯಾವಾಗಲೂ ಇದ್ದು ಅವರ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾಗಿ, ಶಿಸ್ತಿನ ರಿಕ್ಷಾ ಚಾಲಕರಾಗಿ ಸಿಐಟಿಯುವಿನ ಧೋರಣೆಗನುಸಾರವಾಗಿ ಸಂಘಟನೆಯನ್ನು ವಿಸ್ತರಿಸಿ-ಬೆಳೆಸಲು ಎಲ್ಲರೂ ಕ್ರಿಯಾಶೀಲರಾಗಿ ಕೆಲಸ ಮಾಡುವಂತೆ ವಿನಂತಿ ಮಾಡಿಕೊಂಡರು.

ಸಭೆಯ ಅಧ್ಯಕ್ಷತೆ ವಹಿಸಿದ ಎಚ್. ಕರುಣಾಕರವರು, ಕಳೆದ ಏಳು ವರ್ಷದ ಅವಧಿಯಲ್ಲಿ ರಿಕ್ಷಾ ಚಾಲಕರು ಶಿಸ್ತುಬದ್ಧವಾಗಿ ಸಂಘಟನೆ ಕೆಲಸ ಮಾಡಿ, ಸದಸ್ಯರ ಸಂಖ್ಯೆ ಹೆಚ್ಚಿಸಿ ಅಪಘಾತದಲ್ಲಿ ನೊಂದವರಿಗೆ ಪರಿಹಾರ ನೀಡಿ ಸಹಕರಿಸಿದ್ದಕ್ಕೆ ಅಭಿನಂದಿಸಿದರು.

17 ಮಂದಿಯ ಹೊಸ ಸಮಿತಿಯನ್ನು ರಚಿಸಿ ಅದರ ಅಧ್ಯಕ್ಷರಾಗಿ ಎಚ್. ಕರುಣಾಕರ ಕಾರ್ಯದರ್ಶಿಯಾಗಿ ವಿ. ಶೇಖರ ಉಪಾಧ್ಯಕ್ಷರಾಗಿ ವಿ. ಆನಂದ ವಿ. ನರಸಿಂಹ ಜತೆ ಕಾರ್ಯದರ್ಶಿಯಾಗಿ ಎನ್. ಉಮೇಶ ಮತ್ತು ಮಕ್ಸಿಮ್ ಡಿಮೆಲ್ಲೊ ಕೋಶಾಧಿಕಾರಿಯಾಗಿ ಹರಿದಾಸ್ ಅವರುಗಳನ್ನು ಆಯ್ಕೆ ಮಾಡಲಾಯಿತು. ★

ಡಿ. ವೈ. ಎಫ್. ಐ. ಸಭೆ

27-8-84 ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಖಾರ್ವಿಕೇರಿ ಗ್ರಾಮ ಸಮಿತಿಯ ಸಭೆಯು ಮೋಹನ ಸಾರಂಗರ ಅಧ್ಯಕ್ಷತೆಯಲ್ಲಿ ನಡೆಯಿತು. ಡಿ ವೈ. ಎಫ್. ಐ. ಮುಖಂಡರುಗಳಾದ ಮಹಾಬಲ ವಡೇರ ಹೋಬಳಿ, ಶಂಕರ ಖಾರ್ವಿ ಮತ್ತು ವೆಂಕಟೇಶ ಕೋಣಿಯವರು ಸಭೆಯಲ್ಲಿ ಭಾಗವಹಿಸಿದ್ದು ಸಂಘಟನೆಯ ಧ್ಯೇಯೋದ್ದೇಶ ಮತ್ತು ಕಾರ್ಯಕ್ರಮಗಳನ್ನು ವಿವರಿಸಿದರು. ಸಭೆಯು ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಶ್ರೀಯುತರುಗಳಾದ ಬಾಬು ಎ. (ಅಧ್ಯಕ್ಷ), ರತ್ನಾಕರ ಖಾರ್ವಿ (ಕಾರ್ಯದರ್ಶಿ), ಬಸವ ಖಾರ್ವಿ (ಉಪಾಧ್ಯಕ್ಷ), ಕುಮಾರ್ ಮದ್ದುಗುಡ್ಡೆ (ಉಪಾಧ್ಯಕ್ಷ), ಲಕ್ಷ್ಮಣ ಪ್ಯಾರ್ (ಜತೆ ಕಾರ್ಯದರ್ಶಿ), ರಾಧಾಕೃಷ್ಣ ಸಾರಂಗ (ಜತೆ ಕಾರ್ಯದರ್ಶಿ), ಸಮಿತಿ ಸದಸ್ಯರುಗಳಾಗಿ ಕೃಷ್ಣ ಮೆಂಡನ್, ಶ್ರೀನಿವಾಸ ಖಾರ್ವಿ, ಉದಯ ಸಾರಂಗ, ವಾಸುದೇವ ಖಾರ್ವಿ, ವಿಠ್ಠಲ ಖಾರ್ವಿ, ಸದಾಶಿವ ಖಾರ್ವಿ, ಮಾಧವ ಮಲ್ಪೆ, ಗಣಪತಿ ಕ್ಯೊತರಾರ್, ಮೋಹನ ಸಾರಂಗ, ಶಂಕರ ಖಾರ್ವಿ: ಆಯ್ಕೆಯಾದರು. ಪ್ರಾರಂಭದಲ್ಲಿ ಬಸವ ಖಾರ್ವಿಯವರು ಸಭೆಯನ್ನು ಸ್ವಾಗತಿಸಿದರು. ಶ್ರೀಯುತ ಕುಮಾರ್ ಮದ್ದುಗುಡ್ಡೆಯವರು ಧನ್ಯವಾದವನ್ನಿತ್ತರು.

ರಾಯಚೂರಲ್ಲಿ ಮಹಿಳೆಯರ ಪ್ರಥಮ ಸಮಾವೇಶ

ಭಾರತ ದೇಶದಲ್ಲಿಯ ನಗರ ಹಾಗೂ ಹಳ್ಳಿಗಳ ಮಹಿಳೆಯರನ್ನು ಸಂಘಟಿಸಿ, ಅವರಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಪ್ರಜ್ಞೆ, ವೈಚಾರಿಕ ದೃಷ್ಟಿಕೋನ ಬೆಳೆಸಿ ಸಮಾಜದಲ್ಲಿಯ ಅನ್ಯಾಯಗಳ ವಿರುದ್ಧ, ಸಾಮಾಜಿಕ—ಆರ್ಥಿಕ ವ್ಯವಸ್ಥೆಯ ಮೂಲಭೂತ ಬದಲಾವಣೆಗಾಗಿ, ಶೋಷಣೆ ರಹಿತ ಸಮಾಜದ ವ್ಯವಸ್ಥೆಗಾಗಿ ಹೋರಾಡುತ್ತಿರುವ, ಶ್ರಮಜೀವಿ ಹೋರಾಟಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತೆ ಮಾಡುವ ಉದ್ದೇಶದಿಂದ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರ ಜಿಲ್ಲಾ ಸಮಿತಿಯ ಪ್ರಥಮ ಸಮಾವೇಶ ಸೆಪ್ಟೆಂಬರ್ 15 -16 ರಂದು ರಾಯಚೂರಿನಲ್ಲಿ ನಡೆಯುತ್ತಿದೆ.

ಕಾ| ಸುಶೀಲಾ ಗೋಪಾಲನ್, ಶ್ರೀಮತಿ ಸರೋಜಿನಿ ಮಹಿಷಿ, ಆಂಧ್ರದ ಮುಖಂಡರೆಲ್ಲಾ ಈ ಸಮಾವೇಶದಲ್ಲಿ ಭಾಗವಹಿಸುತ್ತಾರೆ. ಕರ್ನಾಟಕ ರಾಜ್ಯದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಈ ಸಮಾವೇಶದಲ್ಲಿ ಭಾಗವಹಿಸಿ, ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಸ್ವಾಗತ ಸಮಿತಿಯ ಕಾರ್ಯದರ್ಶಿ ಹರಿಣಿಕಕ್ಕೇರಿ ಹಾಗೂ ಜಿಲ್ಲಾ ಘಟಕದ ಕಾರ್ಯದರ್ಶಿ ಶ್ಯಾಮಲಾಪೂಜಾರ ಕೇಳಿಕೊಂಡಿದ್ದಾರೆ.

(7ನೇ ಪುಟದಿಂದ)

1974 ರಲ್ಲಿ ಕೇಂದ್ರ ಸರಕಾರವು ನಗರಾಸ್ತಿ ಕಾಯಿದೆಯನ್ನು ಜ್ಯಾರಿಗೊಳಿಸಿ ಮಂಗಳೂರು ತಾಲೂಕಿನ 22 ಗ್ರಾಮಗಳಿಗೆ ಅನ್ವಯಿಸಿತು. ಈ 22 ಗ್ರಾಮಗಳಲ್ಲಿರುವ ಕೃಷಿ ಭೂಮಿಯನ್ನು ವಶಪಡಿಸಲು ಸರಕಾರದ ಸಂಬಂಧಿಸಿದ ಇಲಾಖೆಯಿಂದ ರೈತರಿಗೆ ಆಗಾಗ್ಗೆ ಬರುವ ನೋಟೀಸಿನಲ್ಲಿ- ನಕ್ಷೆ ಮೊದಲಾದ ದಸ್ತಾವೇಜುಗಳನ್ನು ಹಾಜರು ಪಡಿಸಬೇಕೆಂದು ಸೂಚಿಸಲಾಗಿದ್ದು ರೈತರು ತಮ್ಮ ಭೂಮಿಯನ್ನು ಕಳಕೊಳ್ಳುವ ಭೀತಿಯಲ್ಲಿದ್ದಾರೆ.

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K. V. Temple Street, Sultanpet B 53 Phone: 24514
Editor : P. Ramachandra Rao
Managing Editor : N. K. Upadhyaya